ಕೊರವಂಜಿ



Koravanji

ನವೆಂಬರ್ ೧೯೪೫
ಮಾಸ ಪತ್ರಿಕೆ

ಸಂಪಾದಕರು :
ಶ್ರೀ॥ ರಾ. ಶಿ.

ಚಿತ್ರಕಾರರು :
ಶ್ರೀ ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ॥ ಬುಳ್ಳ.
ಶ್ರೀ॥ ಖಾರಾಂತ.
ಶ್ರೀ॥ ಡಿ. ವೆಂಕಟೇಶಮೂರ್ತಿ.
ಶ್ರೀ॥ " ದುರ್ಮುಖಿ "
ಇತ್ಯಾದಿ, ಇತ್ಯಾದಿ.

ಬಿಡಿ ಪತ್ರಿಕೆ - - ಕೇವಲ ಎರಡಾಣೆ

ತಿಳಿನಗೆಯ ಮಾಸಪತ್ರಿಕೆ

ಕೊರವಂಜಿ


―o―

ವಿಷಯಾನುಕ್ರಮಣಿಕೆ

	ವಿಷಯ	ಪುಟ
೧.	ಕುಹಕಿಡಿಗಳು	೧
೨.	ಉರಿಗಾಳು	೩
೩.	ನೀನಾರು ? ನಾ ನಾರು ?	೫
೪.	ಚೀಲವಂತರು	೮
೫.	ದೀಪಾವಳಿ ಡಿಕ್ಷನರಿ	೧೧
೬.	ಬೊಂಬುಲೆನ್ಸ್	೧೨
೭.	ನವೀನ ಗಾದೆಗಳು	೧೪
೮.	ಯುದ್ಧ ಸಾಮಗ್ರಿ	೧೫
೯.	ಗಿದ್ದಿದ್ದರೆ	೧೮
೧೦	ಗುಮಾಸ್ತೆಯ ಪೇಡು	೨೦
೧೧.	ಮೂರ್ಖೆ	೨೩
೧೨.	ರಾಜೀವಪುರದಲ್ಲಿ ರಾಯ ಬಹದ್ದೂರರಂತೆ	೨೫
೧೩.	ಲಂಚದ ಸಮಸ್ಯೆ	೨೮
೧೪.	ಮಂಗಯ್ಯನ ವಚನಗಳು	೨೯
೧೫.	(ಜಾನ್) ಬುಳ್ಳನ ಪ್ರತಾಪ	೩೧
೧೬.	ಸಾಹಿತ್ಯ ವ್ಯವಸಾಯಕ್ಕೆ ಬಹುಮಾನಗಳು	೩೨




ಮುಖದ ಸೌಂದರ್ಯಕ್ಕೆ



ಮಣ್ಯಂ ಅಂಡ್ ಕೋ,

ಮದರಾಸು — — ಬೆಂಗಳೂರು






"ನೀನು ಮಾತನಾಡುವ ತರಹದಿಂದ, ಇದೆಲ್ಲವನ್ನೂ ನಿನ್ನ ಸ್ವಸಾಮರ್ಥ್ಯದಿಂದಲೇ ಸಾಧಿಸಿರುವೆಯೆಂದು ತೋರ್ಪಡಿಸುತ್ತಿದ್ದೀಯೆ ನಿನ್ನ ಶಿಕ್ಷಣೆಗೆ ನಾನು ಉಳಿತಾಯ ಮಾಡಿದ ಹಣವು ಮುಖ್ಯ ಸಹಕಾರಿಯಾಯಿತೆಂಬುದನ್ನು ನೀನು ಸ್ವಲ್ಪ ಜ್ಞಾಪಿಸಿಕೋ ನೀನೇನೊ ಶ್ಲಾಘನಾರ್ಹನಾಗಿ ಮೆಹನತ್ತು ಮಾಡಿದ್ದೀಯೆ, ಆದರೆ ನಾನು ಕೂಡಿಟ್ಟ ಹಣವಿಲ್ಲದಿದ್ದರೆ, ನೀನು ಈಗಿನಂತೆ ಒಳ್ಳೆಯ ಪದವಿಯನ್ನು ಹೊಂದಲು ಸಾಧ್ಯವಾಗುತ್ತಿರಲಿಲ್ಲ"

ಇದು, ಇನ್ನು ಹನ್ನೆರಡು ವರ್ಷಗಳ ನಂತರ, ಯಾರೋ ಒಬ್ಬ ಹಿಗ್ಗುವ ತಂದೆಗೂ, ಅವನ ಶ್ರೇಯೋಭಿವೃದ್ಧಿ ಹೊಂದಿದ ಮಗನಿಗೂ ನಡೆಯಬಹುದಾದ, ಕಲ್ಪನಾಸಂಭಾಷಣವಾಗಿರಬಹುದು. ಆದರೆ ಅದರಲ್ಲಿ ಅಸಂಭವವಾದ ಅಂಶವೇನೂ ಇಲ್ಲ ನಮ್ಮ ದೇಶವು ಮಹತ್ಕಾರ್ಯಗಳನ್ನು ನೆರವೇರಿಸುವ ಮಾರ್ಗದ ದ್ವಾರವನ್ನು ಈಗ ಸಮೀಪಿಸಿರುತ್ತದೆ ನಮ್ಮ ತರುಣರಿಗೆ ಸುಸಮಯಗಳು ಶೀಘ್ರವಾಗಿ ಲಭಿಸುವ ಸನ್ನಿವೇಶಗಳುಂಟಾಗಿವೆ ಆದರೆ ಇವುಗಳನ್ನು ರೂಢಿಸುವುದಕ್ಕೂ, ಮತ್ತು ನಮ್ಮ ಮಕ್ಕಳುಮರಿಗಳ ಶಿಕ್ಷಣೆಗೂ, ಭಾರೀ ಬಂಡವಾಳವು ಅವಶ್ಯವಾಗುತ್ತದೆ ಈಗ ಮಿತವ್ಯಯವನ್ನು ಆಚರಿಸಿ, ಹಣವನ್ನು ಹಿಡಿತದಿಂದ ಖರ್ಚು ಮಾಡಿದ್ದೇ ಆದರೆ, ಆ ಬಂಡವಾಳವನ್ನು ನಿರ್ಮಿಸಲು ಸಾಧ್ಯವಾಗುವುದು ಆದುದರಿಂದ,

ನಾಳೆಗಾಗಿ ಇಂದಿನ ದಿನವೇ ಅಂದಾಜು ಮಾಡಿರಿ. ನಿಮ್ಮ ಶಕ್ತಿಯಿದ್ದಷ್ಟು ಉಳಿತಾಯ ಮಾಡಿರಿ.

ಆದರೆ ನೀವು ಉಳಿತಾಯ ಮಾಡುವುದನ್ನು [illegible] ಮತ್ತು ನಿಮಗೆ ಬೇಕಾದಾಗ ಸಿಕ್ಕುವಂತೆಯೂ [illegible] ಇರಿಸಬೇಕೆಂಬ ಅಂಶವನ್ನು ಜ್ಞಾಪಕದಲ್ಲಿಡಿರಿ
ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು [illegible] ಮೆಂಟು ಲೋನುಗಳು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕು ಅಕೌಂಟುಗಳು ಪರಸ್ಪರ ಸಹಾಯಕ ಸಂಘಗಳು [illegible] ಅಕೌಂಟುಗಳ ಇವುಗಳು ಸುರಕ್ಷಿತವಾದ ಮತ್ತು ಲಾಭಕರವಾದ ಹಣ [illegible] ಮಾರ್ಗಗಳು.
ಜಮೀನುಗಳು, ಕಟ್ಟಡಗಳು ವ್ಯಾಪಾರದ ಸರಕುಗಳು ಕೈಗಾರಿಕೆ ಸಾಮಾನುಗಳು ಅಥವ ಆಭರಣಗಳು ಇತ್ಯಾದಿಗಳನ್ನು ಕೊಳ್ಳುವುದರಲ್ಲಿ ನಿಮ್ಮ ಬಂಡವಾಳವನ್ನು ಹಾಕಬೇಡಿರಿ ಈಗಿನ ದಿನಗಳಲ್ಲಿ ಅವುಗಳ ಬೆಲೆಯು, ಅವುಗಳ ಯೋಗ್ಯತೆ ಮೀರಿದವುಗಳಾಗಿರುತ್ತವೆ. ನಿಮ್ಮ ಭವಿಷ್ಯೋಪಯೋಗಕ್ಕಾಗಿ ಉಳಿತಾಯ ಮಾಡಿ ಭದ್ರಪಡಿಸಿರಿ

ಗೌರ್ನಮೆಂಟ್ ಆಫ್ ಇಂಡಿಯಾದ ಫಿನಾನ್ಸ್ ಡಿಪಾರ್ಟ್‌ಮೆಂಟಿನಿಂದ ಪ್ರಕಟಿಸಲ್ಪಟ್ಟಿರುತ್ತದೆ AAA 153 KN



ಸಂಪುಟ ೪ } ನವೆಂಬರ್ ೧೯೪೫ { ಸಂಚಿಕೆ ೮

ಕುಹಕಿಡಿಗಳು

—o—

ಶಾಂತಿಮೂರ್ತಿ ಯೇಸು ಕ್ರಿಸ್ತನ ಪುಣ್ಯಭೂಮಿಯಾದ ಪಾಲೆಸ್ಟೈನಿನಲ್ಲಿ, ಈಗ 'ಶಾಂತಿಯು' ಭೀತಿಯು ತಲೆದೋರಿದೆಯಂತೆ.

* * *

ರಾಜಾಜಿಯವರು ಭಾಷಣದಲ್ಲಿ "ಬ್ರಾಹ್ಮಣರು ಎಲ್ಲ ದೇಶಗಳಲ್ಲಿಯೂ ಇದ್ದಾರೆ. ಸಂಸ್ಕೃತಿ ಇದ್ದವರೆಲ್ಲರೂ ಬ್ರಾಹ್ಮಣರು" ಎಂದರು.

ಶ್ರೀಯುತ ಶಿವರಾಜರವರು ಅದಕ್ಕೇ, 'ಸಂಸ್ಕೃತಿಯ ಸಂಪರ್ಕವಿರುವ ಹಿಂದೂ ಮತವನ್ನೇ ಬಿಡಬೇಕು ನಾವು' ಎಂದು ಹೇಳಿದ್ದು.

* * *

ಅಟ್ಲಾಂಟಿಕ್ ಛಾರ್ಟರು ಎಲ್ಲಿ ಹೋಯಿತು ಎಂದು ಹುಡುಕುತ್ತಿದ್ದರಲ್ಲಾ, ಈಗ ಸಿಕ್ಕಿದೆಯಂತೆ ಅದು—ಇಂಡೊನೇಷ್ಯಾದಲ್ಲಿ.

* * *

'ಮಂತ್ರಿಗಳು ತಲೆಗೆ ರುಮಾಲು ಧರಿಸಿ ಬರಬೇಕು'. ಪ್ರ. ಪ್ರ. ಸಭೆಯಲ್ಲಿನ ಒಂದು ಅರಿಕೆ—

—ತಲೆಯಲ್ಲಿ ಕಡೆಗೆ ಒಂದು ಟೋಪಿಯಾದರೂ ಬೇಡವೇ ?

* * *

ಬರ್ಮಾ, ಇಂಗ್ಲೆಂಡಿನ, ಪುನರ್ರಚನೆಗೆ ಭಾರತೀಯ ಕೂಲಿಕಾರರ ಸಹಾಯವು ಬೇಕಂತೆ.

—ಪುನರ್ರಚನೆಯಾದ ಮೇಲೆ ಆಫ್ರಿಕಾದಲ್ಲಿದ್ದಂತೆಯೇ ಶಾಸನಗಳನ್ನು ಹೊರಡಿಸುವುದು ಸುಲಭವಂತೆ.

*　　　*　　　*

ಅಮೆರಿಯವರು ಆಗಲೇ ಜಂಭಕೊಚ್ಚಿಕೊಳ್ಳುತ್ತಿರುವರಂತೆ—ನಾನು ಕಟ್ಟಿದ ಕುದುರೆ, ಯಾವ ಗಾಡಿಯಾದರೆ ತಾನೇ ಏನು, ಕುದುರೆ ಲಾಯಕ್ಕೇ ಹೋಗಬೇಕು—ಎಂದು.

ಅಜಾದರ ಖಂಡನೆಯನ್ನು ಕೇಳಿದ ಮೇಲೆ—

*　　　*　　　*

ಸಾಹಿತ್ಯ ಪರಿಷತ್ತಿನ ಮದ್ರಾಸ್ ಅಧಿವೇಶನಕ್ಕೆ ಶ್ರೀಯುತ ಕೈಲಾಸಂ ಅವರು ಅಧ್ಯಕ್ಷರಾಗಿ ಆಯ್ಕೆ ಆಗಿದ್ದಾರಂತೆ.

—ಕಡೆಗೂ ಕನ್ನಡ ಕರಗತವಾಯಿತೇ ಕೈಲಾಸ—

*　　　*　　　*

ತುಳಿದ ಕಾಲಿಗೆ ತನ್ನ ಪರಿಮಳವ ಹಚ್ಚುವ ಜಾಜಿಯಂತೆ ಕಣಾ ಕ್ಷಮೆ. ಎಂದನಾ ಕೊರವಂಜಿ ಕಾಯುವಪರಂಜಿದೇವಾ—

*　　　*　　　*

ಕೆನ್ನೆಗ್ಹೊಡೆದ ಕೈಗೆ ಮುತ್ತಿಡುವಂತೆ ಕಣಾ ಪ್ರೇಮ ಎಂದನಾ ಕೊರವಂಜಿ ಕಾಯುವಪರಂಜಿದೇವಾ.

*　　　*　　　*

ತಿರುವಾಂಕೂರಿನಲ್ಲಿ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಹಿರಿಯರ ಹೊಡೆದಾಟವಾಯ್ತಂತೆ.

*　　　*　　　*

ಶ್ರೀಯುತ 'ಖರೆ' ಅವರಂದರಂತೆ—'ಈಗಿನ ಮಂತ್ರಿಮಂಡಲವು ಮುಕ್ತಾಯವಾದರೆ ನಂತರ ಜನ ಸೇವೆಯನ್ನು ಕೈಗೊಳ್ಳುತ್ತೇನೆ' ಎಂದು.

—ಹೀಗೇ ಅಂದರೆ ಅವರು ?—ನಮಗೇನೊ ಅನುಮಾನ ಇತ್ತು ಅನ್ನಿ.

*　　　*　　　*

ಎಲ್ಲೋ·ಒಂದೆಡೆಯಲ್ಲಿ ರಿಸರ್ವ್ ಪೋಲೀಸರಿಗೂ ಕಾನ್‌ಸ್ಟೇಬಲ್ಲರಿಗೂ ಹಣಾಹಣಿ ಹೊಡೆದಾಟವಾಯ್ತಂತೆ.

—ಎಂದಿನಂತೆ ಕಾಂಗ್ರೆಸ್ ಮುಂದಾಳುಗಳು ಸಮಾಧಾನ ಮಾಡಿದರಂತೆ.

*　　　*　　　*

ಅಂದ ಮೇಲೆ ಯಾರ ಮೇಲೆ ಫಿರ್ಯಾದು ಹಾಕುತ್ತಾರೆ ಎಂದು ಕೇಳಬಹುದೇ ನಾವು.

ಉರಿಗಾಳು

ಹಿಟ್ಲರ್ ಇನ್ನೂ ಬದುಕಿರಬಹುದೆಂದು ಜನರಲ್ ಐಸನ್‌ಹೊವರ್‌ರವರು ಹೇಳಿದರು (ಸುದ್ದಿ)........ಕೂಸು ಸತ್ತರೂ, ಕಿರಿಚುವುದು ನಿಲ್ಲಲಿಲ್ಲ.

*　　*　　*

ರಷ್ಯನ್ ಭಾಷೆಗೆ ಮಹಾಭಾರತವನ್ನು ತರ್ಜುಮೆ ಮಾಡುತ್ತಿರುವರಂತೆ........ ಆಟಂ ಬಾಂಬಿಗೆ ಬದಲಾಗಿ ನಾರಾಯಣಾಸ್ತ್ರ ಪಾಶುಪತಾಸ್ತ್ರಗಳನ್ನು ಸಂಪಾದಿಸುವ ತಂತ್ರವಿರಬಹುದೆ ?

*　　*　　*

೩ ಲಕ್ಷ ರೂಪಾಯಿ ಕೊಟ್ಟು ಶೀಮೆಯಿಂದ ಒಂದು ಕುದುರೆ ಮರಿಯನ್ನು ಇಂಡಿಯಾ ದೇಶದ ರಾಜರೊಬ್ಬರು ಕೊಂಡುಕೊಂಡರಂತೆ .. ....ಮರಿ ತರುವುದಕ್ಕಿಂತ ಕುದುರೆ ಮೊಟ್ಟೆ ತಂದಿದ್ದರೆ, ಇನ್ನೂ ಅಗ್ಗವಾಗಿ ಸಿಕ್ಕುತ್ತಿತ್ತೊ ಏನೋ? ಅಂತ ನಮ್ಮೂರಿನವರು ಅನುಮಾನಿಸುತ್ತಿದಾರೆ.

*　　*　　*

" ನಮ್ಮ ದೇಶದ ಮಕ್ಕಳು ಇಂಗ್ಲಿಷ್ ಭಾಷೆ ಮೂಲಕ ವಿದ್ಯೆ ಕಲಿಯುವುದೆಂದರೆ ಕಾಲಿಂದ ಊಟಮಾಡಲು ಕಲಿಯುವ ಹಾಗೆಯೇ " (ರಾಜಾಜಿ)....ನಮ್ಮ ದೇಶದ ಮಕ್ಕಳು ಹಸಿವು ತಡೆಯಲಾರದೆ, ಕಾಲನ್ನೇ ತಿನ್ನಲು ಪ್ರಯತ್ನಿಸುತ್ತಿರುವುದನ್ನು ನಾವು ನೋಡಿದೇವೆ.

*　　*　　*

" ಪ್ರತಿವರ್ಷವೂ ಇಂಡಿಯಾದೇಶದಲ್ಲಿ ೩೦ಲಕ್ಷ ಟನ್ ಅಕ್ಕಿಯನ್ನು ಹೆಗ್ಗಣಗಳು ತಿಂದುಬಿಡುತ್ತಿವೆ " (ಅಧಿಕಾರಿ ಭಾಷಣ) ..ನಾವು ನೋಡಿರುವ ಹೆಗ್ಗಣಗಳು ಸಂದ ಅಕ್ಕಿಯನ್ನು ಹೂರಿ, ಇತರೇ ಪದಾರ್ಥಗಳನ್ನು ಕೊಂಡುಕೊಳ್ಳುತ್ತಿವೆ.

*　　*　　*

ಡಿಲ್ಲಿಯಲ್ಲಿ ಒಂದು ಶಿಲಾ ಪ್ರತಿಮೆಯನ್ನು ೬೦ ಅಡಿ ಎತ್ತರದ ಪೀಠದ ಮೇಲೆ ನಿಲ್ಲಿಸುವರಂತೆ .. ಎಲ್ಲ ಪ್ರತಿಮೆಗಳನ್ನೂ ಹಾಗೆ ಮಾಡಿದರೆ, ವಾಸಿ.

ಪ್ರಾಣಿಗಳ ಕಣ್ಣುಗಳನ್ನು ಪುಡಿಮಾಡಿ ತಯಾರಿಸಿದ ಒಂದು ಔಷಧಿ ನಮ್ಮ ನೇತ್ರ ರೋಗಗಳನ್ನು ವಾಸಿಮಾಡಬಲ್ಲುದೆಂದು ಒಬ್ಬರು ಸಾರುತ್ತಿದಾರೆ....ಕಣ್ಣಿಗೆ ಕಣ್ಣೆರಚುವವನ ತಂತ್ರವೊ ?

* * *

ಮಿಲಿಟರಿ ಲಾರಿಗಳ ಡ್ರೈವರುಗಳಿಗೆ ಸುಲಭದರದಲ್ಲಿ ಟ್ಯಾಕ್ಸಿಗಳನ್ನು ಕೊಂಡು ಕೊಟ್ಟು ಸಹಾಯಮಾಡುವ ಒಂದು ಯೋಜನೆ ಇದೆಯಂತೆ....ಹಾಗಾದರೆ, ಅವು ಗಳಲ್ಲಿ ಕೂರಲು ಪ್ರಯಾಣಿಕರಿಗೆ ಹೆಚ್ಚು ದುಡ್ಡು ಕೊಡಬೇಕಾಗುತ್ತದೆ.

* * *

ರೇಡಿಯೋ ಸ್ಟೇಷನ್ ಒಂದರ ಕಾರ್ಯಕ್ರಮಗಳು ಹಿಂದಿನಷ್ಟು ಉತ್ತಮ ವಾಗಿಲ್ಲ ಎಂಬ ದೂರು ಬಂದಿದೆ....ಏಕೆ? ಅದೇ ಪ್ರೋಗ್ರಾಮನ್ನೇ ಮತ್ತೆ ಕೊಡುತ್ತಿ ದಾರಲ್ಲಾ !

* * *

'ಹೆಣ್ಣು'ನೋಡಿಕೊಂಡು, ಊರಿಗೆ ಹೋಗಿ ಬರೆಯುತ್ತೇವೆ, ಎಂದು ಹೇಳಿ ಹೋದ ಹುಡುಗ, "ಇತಿ ನಿಮ್ಮವ ...." ಎಂದು ಮಾತ್ರ ಉತ್ತರ ಬರೆದನಂತೆ .. ....ಸಾಲದೇನು ?

* * *

ಅಮೇರಿಕಾದಲ್ಲಿ ೩೦ ಲಕ್ಷ ಹೆಂಗಸರು ಅವಿವಾಹಿತರಾಗಿಯೇ ಉಳಿಯಬೇಕಾ ಗುತ್ತದಂತೆ,....ಅವರು ಹೇಗಾದರೂ ಇರಲಿ ; ಮಕ್ಕಳ ಪಾಡೇನು ?

* * *

ಹಾಲಿವುಡ್‌ನ ಸಿನಿಮಾತಾರೆ ಒಬ್ಬಳು ನಮ್ಮ ದೇಶದವರೊಬ್ಬರನ್ನು ಮೊನ್ನೆ ಮದುವೆಯಾದಳಂತೆ........ನಮ್ಮ ದೇಶದವರೊಬ್ಬರನ್ನು ಆಕೆ ಮದುವೆಯಾದದ್ದು ಇದೇ ಮೊದಲು !

* * *

"ಈ ಅನಾಥಾಶ್ರಮದ ಮಕ್ಕಳನ್ನು ಎಲ್ಲ ಕಮಿಟಿ ಮೆಂಬರುಗಳೂ ತಮ್ಮ ಮಕ್ಕಳಂತೆ ಭಾವಿಸುತ್ತಿದಾರೆ" (ಅಧ್ಯಕ್ಷರ ಉಪನ್ಯಾಸ)....ನಿಜ ! ಮೂರು ಹೊತ್ತೂ, ಪಾಪ, ಅವರು ಕಮಿಟಿ ಮೆಂಬರುಗಳ ಮನೆಗಳಲ್ಲೇ ದುಡಿಯುತ್ತಿರುತ್ತಾರೆ.

* * *

"ಬೆಂಗಳೂರಲ್ಲಿ ಬಸ್ಸುಗಳಿಗೆ ಬದಲಾಗಿ ಎಲೆಕ್ಟ್ರಿಕ್ ಟ್ರಾಲಿಗಳನ್ನು ನಡೆಯಿ ಸುವ ಏರ್ಪಾಟುಗಳಾಗುತ್ತಿವೆ" (ಬಾತ್ಮಿ).... .. ಹಾಗಾದರೆ, ಈಗಿನಿಂದಲೇ ಕ್ಯೂ ಕಾಯುವುದು ಒಳ್ಳೆಯದು.

* * *

ಹಿಂದಿ ಚಿತ್ರ ಪ್ರಪಂಚದ ಹಾಸ್ಯಗಾರರು ಹಲವರು ತೆಲುಗು ತಮಿಳು ಚಿತ್ರ ಗಳಲ್ಲಿ ನಟಿಸುವರಂತೆ....ತೆಲುಗು, ತಮಿಳು, ಕನ್ನಡ ಚಿತ್ರಗಳ ಹಾಸ್ಯಗಾರರು ಹಿಂದಿಗೆ ಹೊರಟರೆ .. ತುಂಬಾ ಒಳ್ಳೆಯದು !

ನೀನಾರು ?..............ನಾ, ನಾರು..............? ?

—— o ——

ಕೊಟ್ಟರೇ ಸುಗುಣಿಯಾದೆ,
ಕಟ್ಟಿದರೆ ಉರುಲಾದೆ,
ಬಿಟ್ಟರೇ ನೀ ಸೊಟ್ಟಮೂತಿಯಾದೆ ?
ಕೆಟ್ಟದೇ ಆಡಿದರೆ ಮೇಲುದಬ್ಬಳವಾದೆ,
ನಾನಾರು ಬಲ್ಲೆಯೊ ಎಲೆಮಾನವಾ ?
ಸರಿ ಸರೀ, ಸೋದರತ್ತೆಯ ಮಗಳು ನೀನು !

ಬಳಿವೆ ನಾ ಕಸ ಎನ್ನ
ತೊಳೆವೆ ನಾ ಮನೆಯನ್ನು (!)
ಮುಳಿದು ಕಡ್ಡಿಯ ಕೂಳ ನಾ ಬಡಿಸುವೆ,
ಹೊಳಪು ತಳೆದಿಹ ನಿನ್ನ ನೊಗವ
'ಕಳಪೆ' ಯ ಮಾಳ್ಪೆ
ನಾನಾರು ಬಲ್ಲೆಯೊ ಎಲೆ ಮಾನವಾ ?
ಸರಿ ಸರೀ, ಸೋದರತ್ತೆಯ ಮಗಳು ನೀನು !

ಮುಟ್ಟಿದರೆ ಮುನಿಯಾದೆ,
ಮೆಟ್ಟಿದರೆ ಕಿಡಿಯಾದೆ,
ಇಟ್ಟ ಗೆರೆಯನು ನೀನು ಬಿಟ್ಟು ಅಡ್ಡಾಡಿದರೆ ;
ಎಷ್ಟು ನೀ ಬೇಡಿದರು
ಸೊಟ್ಟ ಮೋರೆಯ ನೋಳ್ಪೆ,
ನಾನಾರು ಬಲ್ಲೆಯೊ ಎಲೆ ಮಾನವಾ ?
ಸರಿ ಸರೀ, ಸೋದರತ್ತೆಯ ಮಗಳು ನೀನು !

ಹೊಡೆವೆ ನೀ ಬುರುಡೆಯನು,
ಕೊಡುವೆ ನಾ ಬತ್ತಿಯನು,
ಒಡನೆ ಮಲ್ಲಿಗೆ ತಂದು ಮುಡಿವೆ ನೀನು !
ಒಡವೆ ಬೇಕೆಂದಿನ್ನು
ಬಿಡದೆ ಬೆನ್ನಟ್ಟುವೆನು,
ನಾನಾರು ಬಲ್ಲೆಯೊ ಎಲೆ ಮಾನವಾ ?
ಸರಿಸರೀ, ಸೋದರತ್ತೆಯ ಮಗಳು ನೀನು !

ಬರುವೆ ನಾ ಬೆನ್ನಟ್ಟಿ,
ತೆರುವೆ ನೀ ಹಣವನ್ನು,
ಕರೆವೆ ನನ್ನನು ಮುನಿದು—ರಿ ಯೆಂದು ;
ಉರಿದು ಬೀಳಲು ನಾನು
ಕಿರಿವೆ ಹಲ್ಲನು ನೀನು,
ನೀನಾರು ಬಲ್ಲೆಯೊ ಎಲೆಮಾನವಾ ?
ಹರಿಹರೀ, ಗೋವು ನಾನು !

ಹಾದಿ ಬೀದಿಯೊಳಲೆದು
ಬೂದಿ ಹೋಟಲ ಹೊಕ್ಕು
ಮೇದು, ಮನೆಗೈದಿ ನಾನಮೃತ ವೀಯೆ,
ಅದನೊಲ್ಲೆನೆಂದೆರಡು ಬಗೆವನೆ ಹೇಳು,
ನೀನಾರು ಬಲ್ಲೆಯಾ ಎಲೆಮಾನವಾ ?
ಹರಿ ಹರೀ ಗೋವು ನಾನು !

ಹೆಚ್ಚು ಮಾತಾಡಿದರೆ ಹುಚ್ಚು ಬಿಡಿಸುವೆನೆಂದು,
ಮುಚ್ಚು ಮರೆಯಿಲ್ಲದೇ ಬಿಚ್ಚಿ ಹೇಳಿನಗೆನಲು ;
ಕೆಚ್ಚೆದೆಯ ಕಟ್ಮಾಳು ಪೆಚ್ಚು ಬೀಳುವೆ ನೀನು,
ನೀನಾರು ಬಲ್ಲೆಯೊ ಎಲೆಮಾನವಾ ?
ಹರಿ ಹರೀ, ನಾನೇ ಗೋವು !

ಅತ್ತೆಯಾ ಮಗಳಾದೆ, ಮುತ್ತಿನಾ ಚೆಂಡಾದೆ,
ರತ್ನದಂತಹ ಮಡದಿ ಮತ್ತೆ ನೀನಾದೆ !
ಕೊತ್ತಿಗಿಂ ಮಿಗಿಲಾದೆ, ಕತ್ತೆನಾ ಕಡೆಗಾದೆ,
ಗೊತ್ತುಗುರಿಯಿಲ್ಲದೇ ತಿತ್ತು ನಾ ಮೆತ್ತಗಾದೆ !
ನೀನಾರು, ನಾನಾರು, ಎಂಬುದನು ನಾಬಲ್ಲೆ,
ಓ, ನನ್ನ ನಲ್ಲೆ !

ಶ್ರೀದೇವಿ ನೀನಾದೆ, ಭೂದೇವಿ ನೀನಾದೆ ,
ಮಾದೇವಿ ಪಾದದಡಿ ಮೂದೇವಿ ನಾನಾದೆ ;
ಛಲದೇವಿ ! ಬಲದೇವಿ ! ನೀದೇವಿ, ನಾದಾಸ !
ನೀನಾರು ; ನಾ, ನಾರು ; ಎಂಬುದನು ನಾ ಬಲ್ಲೆ !
ನೀನೆಲ್ಲಿ—ನಾನಲ್ಲೆ , ಇಲ್ಲದಿರೆ—ನಾನೊಲ್ಲೆ ;
ನಾನಿದನು ಬಲ್ಲೆ ನಲ್ಲೆ ! ನನ್ನ ನಲ್ಲೆ !

—ಬುಳ್ಳ.



" ಹಾಗಾದರೆ 'ಪಾಲೋಗರ ಉಂಡಾಗ ಸಾಲವನು ಕೊಂಬಂತೆ' ಇರುತ್ತೇನ್ಸಾರ್ ?"

—ಚೀಲವಂತರು—

ಈಚೆಗೆ ಪ್ರಯಾಣಿಕರೆಲ್ಲರೂ ಗೋಣಿರಟ್ಟಿನ ಚೀಲ ಹಿಡಿದು ಓಡಾಡುವುದರಿಂದಲೂ, ಸಾಮಾನ್ಯವಾಗಿ ಆಯಾ ಊರಿನವರು ಆಯಾ ಊರಿನ ಅಂಗಡಿಗಳ ಹೆಸರೊತ್ತಿದ ಚೀಲಗಳನ್ನೇ ಧರಿಸುವುದರಿಂದಲೂ, ನಾನು ಮೊನ್ನೆ ರೈಲು ಸ್ಟೇಷನ್‌ನಲ್ಲಿ ನಮ್ಮ ಭಾವನ ಸೋದರ ಮಾವನನ್ನು ಬಲು ಬೇಗ ಪತ್ತೆ ಹಚ್ಚಿದೆ.

ಚಿಂತಾಮಣಿ ಬ್ಯಾಗಿನವರು ಅವತ್ತು ನಾಲ್ಕು ಜನರು ರೈಲಿಂದಿಳಿದರು. ಆದರೆ ಆ ಸೋದರಮಾವನ ಕೈಲಿ ಚಿಂತಾಮಣಿ ಮಾಂಸ ವ್ಯಾಪಾರಿಯದು ಒಂದು ಚೀಲವೂ ಕುಪ್ಪಂ ಕುರಿ ಕಂಟ್ರಾಕ್ಟರದು ಮತ್ತೊಂದು ಚೀಲವೂ ಇತ್ತು. ಆತ ಕುಪ್ಪದಲ್ಲೂ ಕೆಲವು ದಿನ ತಿಪ್ಪೆ ಸಾರಿಸುತ್ತಿದ್ದರು ಅಂತ ಭಾವ ಆಗಲೇ ನಮಗೆಲ್ಲ ಕತೆ ಹೇಳಿದ್ದ. ಸರಿ. ಅವರ ಹತ್ರ ಹೋಗಿ, ಕಿವಿಯಲ್ಲಿ ಗುಟ್ಟಾಗಿ 'ತಾವು ಗುಟ್ಟಹಳ್ಳಿಗೆ ತಾನೆ' ಅಂತ ಕೇಳಿ, ಮನೆಗೆ ಕರೆದುಕೊಂಡು ಬಂದು ಬಿಟ್ಟೆ. "ಇದಕ್ಕೇ ಅಂತ ಕಾಣುತ್ತೆ ಹೆಸರು ಹೊಡೆದ ಚೀಲಗಳಿಗೆ ಎರಡಾಣೆ ಜಾಸ್ತಿ ಕೇಳೋದು ಅಂಗಡಿಯವರು" ಅಂತ ಅಂದರು, ಅವರು ನಗುನಗುತ್ತ.

ಆ ಮಾತು ಕೇಳಿದಾಗ ನನ್ನ ತಲೆಯೊಳಗೆ ವಿಚಾರತರಂಗವೆದ್ದಿತು. ಈ ಸೋದರಮಾವನ ಹಾಗೆ ತಾವು ತಿನ್ನದ ಪದಾರ್ಥವನ್ನು ಯಾರಾದರೂ ಪ್ರಚಾರ ಮಾಡುವರೆ? ಹಲ್ಲಿಲ್ಲದವರು ಹಲ್ಲುಪುಡಿ ವ್ಯಾಪಾರಿಗಳ ಚೀಲವನ್ನು ಹೊತ್ತು ತರಬಹುದೆ? ಒಪ್ಪುತ್ತದೆಯೇ? ಸಪ್ಪೆ ಮೂತಿಯವರು ಮೆಣಸಿನಪುಡಿ ಜಾಹಿರಾತಿನ ಬ್ಯಾಗನ್ನು ಹಿಡಿಯಬಹುದೆ? ತಪ್ಪಲ್ಲವೆ? ಈ ವಿಚಾರದಲ್ಲಿ ಮುಂದಾಲೋಚನೆ ಇರುವ ಜನ ಕಡಮೆ; ಮಂದಾಲೋಚನೆಯವರೇ ಜಾಸ್ತಿ.

ಮಡಿ ಗಂಡಸರ ಕೈಲಿ ಎ. ಬಿ. ಸಿ. ಡಿ. ಎಂಬ ಮ್ಲೇಚ್ಛಾಕ್ಷರ ಮಾಲಾ ವಿರಾಜಿತ ಚೀಲಗಳೂ, ಮಡಿ ಹೆಂಗಸರ ಕೈಲಿ "Boglo ಷೂಸ್ ಕಚ್ಚೋದಿಲ್ಲ" ಎಂಬ ಜಾಹಿರಾತಿನ ಚೀಲಗಳೂ, ಇಂದು ಸರ್ವೆ ಸಾಮಾನ್ಯವಾಗಿವೆ. "ಅನಾಯಕ ಬೀಡಿಗಳನ್ನೇ ಉಪಯೋಗಿಸಿ" ಎಂದು ಸಾರುವ ಚೀಲವನ್ನೇ ಹಿಡಿದುಕೊಂಡು ಪುರೋಹಿತರು ನಮ್ಮ ಮನೆಯೊಳಕ್ಕೆ ನುಗ್ಗುತ್ತಾರೆ. ನಾವು ಮರುಮಾತಾಡದೆ ಅವರನ್ನು ಸ್ವಾಗತಿಸುತ್ತೇವೆ. ಏಕೆ? ಮೊನ್ನೆ ನಾನು ತಿರುಪತಿಬೆಟ್ಟ ಇಳಿಯುತ್ತಿದ್ದಾಗ, ಹರಕೆ ಹೊತ್ತ ಶೆಟ್ಟಿಯಾರ್‌ರೊಬ್ಬರು ಮೆಟ್ಟಿಲು ಹತ್ತುತ್ತಿದ್ದರು ಅವರ ಕೈಲೂ ಒಂದು

ಚೀಲವಿತ್ತು. ಅದರ ಮೇಲೆ, "ಕೂದಲು ಹೋಗಲಾಡಿಸುವ ಸಾಬೂನು" ಒಂದನ್ನು ಬಹಳವಾಗಿ ಹೊಗಳಿದ್ದರು. ಆತ ಪಡುತ್ತಿದ್ದ ವೃಥಾ ಶ್ರಮಕ್ಕಾಗಿ ನಾನು ಮರುಗಿದೆ.

ಮೊನ್ನೆ ಒಬ್ಬರು ಪೋಲೀಸಿನವರು ಗಾಂಧಿಜೀ ಚಿತ್ರವನ್ನೂ, ಅದರ ಕೆಳಗೆ ಅಹಿಂಸಾ ಪರಮೋಧರ್ಮಃ ಎಂಬ ಮಹಾ ವಾಕ್ಯವನ್ನೂ ಹೊರಗೊಂಡ ಒಂದು ಚೀಲದಲ್ಲಿ ಏನನ್ನೋ ಮನೆಗೆ ರವಾನಿಸುತ್ತಿದ್ದರು. ಚೀಲಕ್ಕೂ ಶೀಲಕ್ಕೂ ಇಂತಹ ಅಂತರವಿರಬಾರದು. ವೈದ್ಯರೊಬ್ಬರು "ಸಾಯಿಸುವ ಕಲಿಯುಗ ಬೇಗ ಬರಲಿ" ಎಂಬ ಚೀಲ ಹಿಡಿದಿದ್ದರು. ಕಸಬಿಗೊಂದು ಮಹಾವಾಕ್ಯ, ಮಹಾವಾಕ್ಯ ಕ್ಕೊಂದು ಚೀಲ—ಹೀಗಿದ್ದರೆ ಚೆನ್ನ. ಪೋಲೀಸಿನವರೆಲ್ಲ 'ದಂಡಂ ದಶಗುಣಂ' ಎಂಬ ಚೀಲಗಳನ್ನು ಹೊತ್ತು ಮೆರೆಯಲಿ. ಎಕ್ಸೈಸ್ ಇಲಾಖೆಯವರು ದಮ್ಮನ್ನು ಹೆಮ್ಮಾಗಿ ಮಾರ್ಪಡಿಸಲಿ. 'ನಮ್ಮಲ್ಲಿ ಸಿಲ್ಕು ಉಳಿದಿಲ್ಲ' ಎಂದು ರೇಷ್ಮೆಯವರು ಸಾರಲಿ. ಫಾರೆಸ್ಟಿನವರು 'ಅರಣ್ಯರೋದನ' ಮಾಡಲಿ. ಗುಮಾಸ್ತೆಯವರಿಗಾ ಗಿಯೇ ಸಾವಿರಾರು ಚೀಲಗಳನ್ನು ಅಚ್ಚುಹಾಕಿಸಿ ಹಂಚಿ ಹೊರಿಸಿದರೆ ಒಳ್ಳೆಯದು. 'ಮಾಮೂಲನ್ನು ಮನ್ನಿಸಿ', 'ಹರಿಯುವ ಕಾಲುವೆಯಲ್ಲಿ ಅರ್ಜಿಗಳನ್ನು ಹಾಕಿ' 'ಅರ್ಜೆಂಟೆಂದ್ರೆ ಆರು ತಿಂಗಳು' 'ಸಾಂಕ್ಷನ್ ಆಗಲು ಸಾವಿರ ವಿಘ್ನ' 'ಬೆಣ್ಣೆಯೇ ಬೆಸ್ಟ್ ಲೂಬ್ರಿಕೆಂಟ್' ಮುಂತಾದ ಮೂಲಮಂತ್ರಗಳನ್ನು ಛಾಪಿಸಬಹುದು. 'ಕಾಸಿಗೆ ತಕ್ಕ ಕಂದಾಯ' 'ಪತ್ರಂ ಪುಷ್ಪಂ ಫಲಂ ತೋಯಂ' ಇತ್ಯಾದಿಗಳನ್ನೂ ಪ್ರಚಾರ ಮಾಡಬಹುದು. ಈ ಮಾತುಗಳನ್ನು ಸಾರುವ ಚೀಲಗಳನ್ನು ಗುಮಾಸ್ತೆ ಯರು ಹಿಡಿದು ದೇಶದ ಬಸ್‌ಸ್ಟಾಂಡುಗಳಲ್ಲಿ ನಿಂತು ನೊಣ ಹೊಡಿಯುತ್ತಿದ್ದರೆ, ಆಡಳಿತದ ವಾತಾವರಣ ನಿರ್ಮಲವಾಗುವುದರಲ್ಲಿ ಸಂದೇಹವೇ ಇಲ್ಲ.

ಪ್ರಜೆಗಳೂ ಚೀಲಧಾರಣೆಯಲ್ಲಿ ಹೊಸ ನೀತಿಯನ್ನು ಅವಲಂಬಿಸಬೇಕಾಗು ತ್ತದೆ. ಕರಿಕೋತಿ ಲೇಹ, ಮಂಕಿ ಬ್ರಾಂಡ್ ಸಾಬೂನು, ಆಂಡಾಳ್ ನಶ್ಯ ಇವುಗಳ ವ್ಯಾಪಾರಿಗಳ ಚೀಲವನ್ನು ನಮ್ಮ ಮಹಿಳಾ ಮಣಿಗಳು ಮುಟ್ಟುವಂತೆಯೇ ಇಲ್ಲ. ಹಿಪ್ಪೋ ಟೂತ್‌ಪೌಡರ್, ಕರಡಿ ಕೇಶವರ್ಧಿನಿ, ಮುಂತಾದವುಗಳ ಗೋಜಿಗೆ ಯಾರೂ ಹೋಗುವ ಹಾಗಿಲ್ಲ. "ಬೀಗತಿ ಬಳೆ" "ಹೇಡಿ ಪಟಾಸ್" "ಫಕೀರಪ್ಪ ಹಾರ್ಮೋನ ನಿಯಂ"—ಇವುಗಳನ್ನೂ ಗಂಡಸರು ಹೊತ್ತು ತಿರುಗುವ ಹಾಗಿಲ್ಲ. ಅಂತು ನಮ್ಮಲ್ಲಿ ಹಾಲಿ ಇರುವ, ಹಾಗೂ ನಾಳೆಯಿಂದ ನಮ್ಮ ಕೈ ಸೇರಬಹುದಾದ, ಗೋಣಿರಟ್ಟಿನ, ಹೆಸರು ಹೊಡೆದ ಚೀಲಗಳನ್ನೆಲ್ಲ ನಾವು ಕೂಡಲೇ ಪರೀಕ್ಷಿಸಿ, ನಮ್ಮ ನಮ್ಮ ರೂಪು ಲಾವಣ್ಯ ಕಸಬು ಕಲ್ಪನೆಗಳಿಗನುಗುಣವಾದ ಚೀಲಗಳನ್ನೇ ಇನ್ನು ಮುಂದೆ ಉಪ ಯೋಗಿಸುವುದು ಸೂಕ್ತ.

ಹೀಗೆಂದು ಸೋದರಮಾವನಿಗೆ ಹೇಳಿದೆ. ಅವರು ಆ ಎರಡು ಚೀಲಗಳನ್ನೂ ನಮ್ಮ ಮನೆಯಲ್ಲೇ ಬಿಟ್ಟು, ಬೆಳಗಿನ ರೈಲಿಗೆ ಹೊರಟುಹೋದರು.



"ವಾಂಕಿಂಗ್ ಹೊರಡೋಕ್ಮುಂಚೆ ತಿಂಡಿ ಮಾಡಿದೀನಿ ತಿಂದ್ಬಿಟ್ಟು ಹೋಗಿ"........
"ಹಾಗಾದ್ರೆ ನಾನು ವಾಕಿಂಗ್ ಹೋಗೊಲ್ಲ"

ದೀಪಾವಳಿ ಡಿಕ್ಷನರಿ

—೩—

ವಕ್ಷಶಿಲಾ : ದೀಪಾವಳಿಗೆ ಬನ್ನಿ ಎಂದು ಬರೆಯದ ಮಾವನ ಕಲ್ಮನಸ್ಸು

ಜಾತಕಪಕ್ಷಿ: ಆಹ್ವಾನ ಬರುತ್ತೋ ಇಲ್ಲವೋ ಎಂದು ಅಳಿಯನಿಗೆ ಶಾಸ್ತ್ರ ಹೇಳಿದ 'ಚೀಟಿ ಎತ್ತುವ ಪಕ್ಷಿ'

ಧನದನ್ನೆ : ವರದಕ್ಷಿಣೆಗಾಗಿ ಕೈಹಿಡಿದ ಸತಿ

ಅನುನಾಯಿ : ಅಳಿಯನ ಸಂಗಡ ಹೊರಟ ಗೆಳೆಯ

ದಾಸೋಹ : ಮಾವನಿಗೆ ಅಳಿಯ ಮಾಡಿದ ನಮಸ್ಕಾರ

ಸಾಲೋಗರ : ಅಳಿಯನಿಗೆ ಮಾಡಿದ ಅಡಿಗೆ

ಪ್ರಾಚೀನಾಭೀತಿ : ಮದುವೆಯ ಸಂಭ್ರಮದಲ್ಲಿ ತಾನು ಹೆದರಿ ನಡೆದದ್ದನ್ನೇ ನೆನೆದು ಆಕೆ ಹಬ್ಬದಲ್ಲೂ ಹೆದರಿ ಓಡಾಡುವುದು

ಶಿಶುಪಾಲ : ಮಾವನ ಮನೆ ಮಕ್ಕಳನ್ನು ಅಳಿಯ ಮುದ್ದಾಡಿಸುವುದು

ಮಂದಹಾಸನ : ಆಕೆ ಜಡೆ ಹೆಣೆಸುತ್ತ ಕುಳಿತಿರುವುದು

ಆರತಿ : ರತಿಯ ಪಕ್ಕದಲ್ಲಿ ಈತ ಆಕಳಿಸುವುದು

ತುಸುಸುಯ್ಯುವುದು : 'ಹೋಗಿಬರುತ್ತೇನೆ' ಅಂದಾಗ, ಆಕೆ

ಗರ್‌ಗುರ್‌ಬತ್ತಿ: 'ಹೊರಡಲೇಬೇಕು' ಅಂದಾಗ, ಆಕೆ

ವೇದನಾರವಿಂದ : ಹೊರಟೇಬಿಟ್ಟಾಗ, ಆಕೆ

ಸುಸ್ವಾಗತ : ಮನೆಗೆ ಹಿಂತಿರುಗಿದಾಗ, ಈತ

—ಶಾರಾಂತ.

—೦—

" ಬೊಂಬುಲೆನ್ಸ್ "

'ಏನಯ್ಯಾ ಜಗ್ಗು, ಸೈಕಲ್ ಮೇಲೆ ಹೋಗುವಾಗ ಅದು ಯಾಕೆ ಹಾಗೆ ಬಿಡದೇ ಬೆಲ್ ಹೊಡೆಯುತ್ತೀ.'

'ಇಲ್ಲದೆ ಇದ್ದರೆ ಹಾದೀಲಿ ದಾರಿ ಬಿಡತಾರೆಯೇ ನಮ್ಮೂರ ಜನರು'.

'ಓಹೋ ಆಂಬುಲೆನ್ಸ್ ಗಾಡಿ ಹಾಗೆ ಗಂಟೆ ಹೊಡೆದರೇ ದಾರೀಬಿಡ್ತಾರೋ ?'

'ಆಂಬುಲೆನ್ಸೋ ಬೊಂಬುಲೆನ್ಸೋ ಹಾಗೆ ಹೊಡೆದುಕೊಂಡರೇ ಹಾದಿ.'

* * *

ಇದು ಯಾಕೋ ಚೆನ್ನಾಗಿತ್ತು ಅನ್ನಿ. ಅವಸರದಲ್ಲಿ ಹೋಗಬೇಕಾದರೆ ಆಂಬುಲೆನ್ಸು. ಎಲ್ಲಾ ಮುಗಿದ ಮೇಲೆ ಮೆಲ್ಲಗೆ ಸಾವಧಾನವಾಗಿ ಸಾವಕಾಶವಾಗಿ ಸಾಗಿಸಬೇಕಾದರೆ ಬೊಂಬುಲೆನ್ಸು. ಹೌದಲ್ಲಾ ! ಬೊಂಬುಲೆನ್ಸು ಆದಕ್ಕೇನೇನೋ ಮೆಲ್ಲಮೆಲ್ಲಗೆ ಸಾಗುವುದು. ಬ್ರಾಹ್ಮಣರು ಮಾತ್ರ ಬೊಂಬುಲೆನ್ಸು ಉಪಯೋಗಿಸುತ್ತಾರೆಯೇ, ಬ್ರಾಹ್ಮಣೇತರರು ತರಹಾವರಿ ಅಲ್ಲವೇ, ಹಾಗೇ ಅವರವರ ಬೊಂಬುಲೆನ್ಸೂ ತರಹಾವರಿ ಅಲ್ಲವೇ ? ನಾಲ್ಕು ಜನ ಒಟ್ಟು ಹೆಗಲು ಕೊಡುವ ಕೆಲಸ. ಇದರಲ್ಲಾದರೂ ಸಮಾನತೆ ಬೇಡವೇ? ಇದರಲ್ಲೂ ನಾಮುಂದು ನೀಹಿಂದು ತರ್ಕವೇ? ಹೊರುವುದು ಖಂಡಿತವಾದರೆ ಹಿಂದೇನು ಮುಂದು ಎಂದು ಎಲ್ಲರೂ ಸಮಾನಹಕ್ಕು ಹೊಂದಿರಬಾರದೇ ? ದೇವರೇ ಬಲ್ಲ, ಏಕಿದೆಲ್ಲವೂ ಹೀಗೋ–ಅವನ ಪಾದಾರವಿಂದ ಸೇರುವುದಕ್ಕೆ ಹೋಗುವಾಗಲೂ ಬೇರೆ ಬೇರೆ ಹಾದಿ, ಬೇರೆ ಬೇರೆ ವಾಹನ, ಬೇರೆ ಬೇರೆ........

* * *

ನಮ್ಮ ಸಂಪಾದಕ ಕಾರ್ಯಾಲಯಕ್ಕೆ ಮಧ್ಯಾಹ್ನ ಬಂದ. ನಾವುಗಳೆಲ್ಲ ಬರೆದ ಲೇಖನಗಳನ್ನೆಲ್ಲಾ ಓದಿದ. ತಲೆ ಕೆರೆದುಕೊಂಡ. ಎಲ್ಲವನ್ನು ಸಂಪಾದಿಸಿದ. ಅಂದರೆ ಹೆಚ್ಚು ಕಡಿಮೆ ಹೊಸದಾಗಿಯೇ ಬರೆದ. ಉಳಿದುದು ನಮ್ಮ ರುಜು ಒಂದೇ. ಎಲ್ಲವೂ ಮುಗಿದ ಮೇಲೆ ನಮ್ಮನ್ನೆಲ್ಲಾ ಬರಹೇಳಿದ. ಅವನು ಕೂತಿದ್ದ ಕೊಠಡಿಯಿಂದ 'ಬೊಂಬೂ ದ್ವೀಪ' ಕಾಣಬರುತ್ತಿತ್ತು. ಆಗ ತಾನೇ ಮೆಳೆಗಳು ಚಿಗುರಿ ಸೊಕ್ಕಿನಿಂದ ತಲೆಯೆತ್ತಿ ನಿಂತಿದ್ದುವು. ಬೀಸುವ ಗಾಳಿಯೊಡನೆ ಸೇರಿ ಚಕ್ಕಂದವಾಡಿ ಹಾಡುತ್ತಿದ್ದುವು. ತಳದಲ್ಲಿ ಹಸುರು ಹುಲ್ಲು,—ಅದರ ಕಿರಿಯ ಅನುಜನಂತೆ, ಬೆಳೆವಳಿಗೆಯ ಚರಿತ್ರೆಯಲ್ಲಿ—ಬಲು ಸೊಂಪು ಹುಲ್ಲು. ಹತ್ತಿರಿದ್ದ ನೀರಿನಲ್ಲಿ ಜೊಂಡು ಜೋರಾಗಿ ಬೆಳೆದಿತ್ತು. ಅದೂ ಇವೆರಡರ ಸಂಸಾರದಲ್ಲೇ ಹುಟ್ಟಿದ್ದಂತೆ. ಬೆಳೆದ ಮೇಲೆ, ನೀರಿನ ಪಾಲಾಗಿ ಅಲ್ಲೇ ಜೀವನ ನಡೆಸುತ್ತಿತ್ತಂತೆ. ಕಣ್ಣುಗಳಿಗೆ ತಂಪಾದ ದೃಶ್ಯ. ಸಂಪಾದಕನು ಹೇಳಿದನು "ನೋಡಿದಿರಾ ! ಎಷ್ಟು ಚೆನ್ನಾಗಿದೆ : ಬೊಂಬು, ಗಳುಗಳ ಮೆಳೆ. ಹುಲ್ಲಿನ ಕಾವಲು, ಜೊಂಡಿನ ಪೊದೆ" ಎಂದು.

ನಾವೆಲ್ಲರೂ ಮಂದಸ್ಮಿತ ವದನಾರವಿಂದ. 'ಹ್ಞೂ'ಗುಟ್ಟಿದೆವು.

'ಅಷ್ಟು ಲಕ್ಷಣವಾದುದೆಲ್ಲವನ್ನು ಕಡಿದು ಕಾಗದಮಾಡಿ ನಿಮಗೆ ಹೀಗೆಲ್ಲಾ ಬರೆಯಲು ಕೊಡುತ್ತಾರಲ್ಲಾ ! ಈ ಜನರಿಗೆ ಬುದ್ಧಿ ಇದೆಯೇ' ಎಂದು ಕ್ಯಾಕರಿಸಿದ.

* * *

ನಮ್ಮ ಕಂಪೆನಿಯಲ್ಲೇ ಇದ್ದ. ಆರಡಿ ಎತ್ತರ. ಯೂನಿಫಾರಂ ಹಾಕಿದ ಸೆಣಕಲ ಸೈಂಧವ ಅಂದರೆ ಆವನೇ. ನೋಡುವುದಕ್ಕೆ ನೋಟ. ಸೊಂಟದಲ್ಲೊಂದು ಗಂಟು ಮೂಟೆ, ಕೊರಳಿಸುತ್ತ ಒಂದು ಗಂಟು, ಮಂಡಿಯ ಹತ್ತಿರ ಗಂಟು, ಮೊಣಕೈ ಹತ್ತಿರ ಷರ್ಟನ್ನು ಮಡಿಚಿಟ್ಟ ಗಂಟು. ಸಾಕ್ಷಾತ್ ಬೊಂಬು ಮನುಷ್ಯ. ನಾವೆಲ್ಲರೂ ಅವನನ್ನು 'ಲೋ, ಬೊಂಬೂ' ಎಂದೇ ಕರೆಯುತ್ತಿದ್ದೆವು. ಊರಿನಲ್ಲಿ ಕೆಲಸ ಸಿಕ್ಕದೆ, ಜೀವನೋಪಾಯಕ್ಕೆಂದು ನಮ್ಮ ಕಂಪೆನಿಗೆ ಸೇರಿದ. ಅವನು ತರಪೇತಾಗಿ ಇನ್ನೇನು ಸೈನಿಕನಾದ ಅನ್ನುವ ವೇಳೆಗೆ ಸಮರವೇ ಸಮಾಪ್ತಿ. ಇನ್ನೇನು ಪರವಾಗಿಲ್ಲ ! ಸಮರಕ್ಕೆ ಹೋದರೂ ಯಮನ ಭಯವಿಲ್ಲ. ಮುಖ್ಯ, ಇವನ ಅಡ್ಡ ಹೆಸರೇ ಇದಕ್ಕೆ ಕಾರಣ. ಹೆಣ ಎಂದು ಹೆಸರಿಟ್ಟುಕೊಂಡರೆ, ಜವರಾಯನು ಕೂಡ ಹೆಣ ಎಂದು ನಂಬಿ ಕರೆಯಲು ಮರೆಯುತ್ತಾನೆ ಎಂದು ನಮ್ಮಲ್ಲಿ ನಂಬಿಕೆ. ಅಂತೇ ಬೊಂಬು ಎಂದವನು ಅಪರ ಕರ್ಮಯೋಗಿ ; ಅವನಿಗೇನು ಅವಸರ ಎಂದೇ ಯುದ್ಧವು ಮುಗಿಯಿತೆನ್ನಬಹುದು. ಹೀಗೆಲ್ಲಾ ಅವನಿಗೆ ಹೇಳಿ ನಕ್ಕು ನಗಿಸುತ್ತಿದ್ದೆವು. ಒಂದು ಸಾಯಂಕಾಲ ಸಿನಿಮಾಕ್ಕೆ ಎಲ್ಲರೂ ಹೋದೆವು. ಹಿಂತಿರುಗುವಾಗ ಹನ್ನೆರಡು ಗಂಟೆ 'ಬೊಂಬೇ' ನಮ್ಮ ಲಾರಿಯ ಸಾರಥಿ. ಅರ್ಧ ಹಾದಿ ಹೋದಾಗ ಎದುರಿಗೆ ಒಂದು ಗಾಡಿ, ಎತ್ತಿನ ಗಾಡಿ. ಎತ್ತು ಬೆದರಿತು. ಲಾರಿ ಪಕ್ಕಕ್ಕೆ ತಿರುಗಿಸಿದ. ಸಾಲುಮರದ ನೊಂಟಕ್ಕೆ ಲಾರಿ ಗುಮ್ಮಿತು. ಬೊಂಬು ಝೋಕು ಹೊಡೆದ-ಕೆಳಕ್ಕೆ ಬಿದ್ದ. ಅವನ ತಲೆಯ ಮೇಲೆ ಆ ಪ್ರಥಮ ಚಿಕಿತ್ಸೆಯ ಭಾರವಾದ ಪೆಟ್ಟಿಗೆ ಬಿತ್ತು. ಒಳಗಿದ್ದ ನಾವೆಲ್ಲಾ ಝೋಕು ಹೊಡೆದೆವು. ಆದರೆ ಕುಲುಕಾಟವಾಯ್ತೇ ವಿನಹಾ ನಮಗೆ ಇನ್ನೇನೂ ಆಗಲಿಲ್ಲ. ಇಳಿದು ನೋಡಿದೆವು. 'ಬೊಂಬು' ಹರಹರ ಎಂದಿದ್ದ. ಪ್ರಥಮ ಚಿಕಿತ್ಸೆಯ ಪೆಟ್ಟಿಗೆಯಲ್ಲಿ ಅಷ್ಟು ಭಾರವಾದ ಸಾಮಾನುಗಳನ್ನು ಇಡಬಾರದು ಎನ್ನಿಸಿತು.

ಹೌದು ! ನೀವು ಅಂದುಕೊಂಡಂತೆಯೇ ಎತ್ತಿನಗಾಡಿಯಲ್ಲಿ ಬೊಂಬು ತುಂಬಿಕೊಂಡು ಬಂದಿದ್ದರು.

ಯುದ್ಧ ಮುಗಿದ ಮೇಲೆ ಯಮನಿಗೆ ಬೇರೆ ಕ್ಷೇತ್ರ ಇತ್ತಿಲ್ಲವೇನೋ, ಹೆಸರು 'ಬೊಂಬು' ಎಂದರೂ ಮರೆಯಲಿಲ್ಲ. ಗಾಡಿಯಿಂದ "ಮುಂದಕ್ಕೆ ಬೇಕಾಗುತ್ತೆ" ಎಂದು ನಾಲ್ಕು ಬೊಂಬು ತೆಗೆದುಕೊಂಡು, ಅವನನ್ನೂ ಹಾಕಿಕೊಂಡು ನಮ್ಮ ನಿಲ್ದಾಣಕ್ಕೆ ಬಂದೆವು.

* * *

ಯಾರೋ, ಎಲ್ಲೋ, ಏಕೋ ಬೊಂಬುಲೆನ್ಸು ಎಂದರು. ಗಂಟುಗಂಟಾಗಿ ಹೊರಟ ಹಳೆಯ ನೆನಪುಗಳ ಸುರಿಮಳೆಯೇ ಆಯ್ತು.

ನವೀನ ಗಾದೆಗಳು

(ದೀಪಾವಳಿ ಸಂಬಂಧ)

ಮೇನ ಕೇನ ಪ್ರಕಾರೇಣ ಹೆಂಡತೀ ಭಾಷಣಂ ಕರೇತ್

ಹೆಬ್ಬೆಟ್ಟೊತ್ತಿ ಒಬ್ಬಟ್ಟಿಗೆ ಸಾಲ ತಂದ

ಗಟ್ಟಿಯಾಗಿ ಅಂದದ್ದು ಅತ್ತೆಗೆ; ಮೆಲ್ಲಗೆ ಅಂದದ್ದು ಅಳಿಯಗೆ

ಅತ್ತು ಕರೆದು ಇರು ಅಂತ ಅನ್ನಿಸಿಕೊಂಡ

ಮಗಳನ್ನ ಕೇಳದೆ ಯಾರೂ ಅಳಿಯನನ್ನ ಕರೆಯಲ್ಲ

ಪಟಾಕಿಗೆ ಹೆದರಿ ನಮ್ಮಕ್ಕ ಭಾವನ ಪಕ್ಕಕ್ಕೆ ನೆಗೆದಳು

ಕಾಸಿನ ಚಟಾಕೀನ ಕೂಸಿನ ಮೇಲೆ ಎಸೆದರು

ಒದ್ದೆ ಚಟಾಕೀನ ಒಣಗಿಸಿ ಒಣಗಿಸಿ ಹಾರಿಸಿದರು

ಮನೆಗೆ ಬಂದ ಅಳಿಯ ಮಾತಾಡೋದೆಲ್ಲ ಚಟಾಕೀನೇ?

ಇತ್ತ ಹುಳಿ, ಅತ್ತ ಸಾರು, ಮಧ್ಯೆ ಮಂಡಿಗೆ

ಬಲಿಪಾಡ್ಯಮಿ ದಿನ ಇಲಿ ಬಿತ್ತು ಮನೇಲಿ

ಮೊದಲನೆಯ ದೀಪಾವಳಿಗೆ ಮಾವ ದಿವಾಳಿ

* * *

ಮಾವನ ಮನೆಯೇ ದೇವಲೋಕ. ತಲೆಯನಲ್ಲಾಡಿಸಿ ನೋಡುವಳು; ಗಂಡನ ಮನವನಲ್ಲಾಡಿಸಿ ನೋಡುವಳು; ಹೊಸಾಹೊಸಬಳ ಕಣ್ಣ ಬಿಲ್ಲಾಟದಲಿ, ಮಾತ ಚೆಲ್ಲಾಟದಲಿ ಇಂದ್ರ ಧನುಸ್ಸಿನ ಬಿಂಕ ಬೆರಗು ಬಿನ್ನಾಣವಿದೆ. ಅತ್ತೆ ಮನೆಯ ಸತ್ತಿಗೆಯ ಸವಿನೆರಳು ತಪ್ಪಿದ ಬಳಿಕ ತರುಣ ಬದುಕುವುದೇ ಸೋಜಿಗ. ಮಾವಿನ ಮರದ ಚಿಗುರೆಲೆಯ ಚೀಪು ತಪ್ಪಿದ ಬಳಿಕ ಕೋಗಿಲೆ ಕುಕಿಲ್ವುದೇ ಸೋಜಿಗ. ಮಲೇರಿಯ ಗಿಲೇರಿಯ ಪರೀಕ್ಷೆ ಗಿರೀಕ್ಷೆ ಎಂಬ ನೆಪವೊಡ್ಡಿ ಹಬ್ಬಕ್ಕೆ ಹೋಗದೆ ಮನೆಯಲುಳಿವುದೇ ಮರ್ತ್ಯಲೋಕ. ಹಸೆಯೇ ಸ್ವರ್ಗ, ಅನಾಹಸೆಯೇ ನರಕ. ಆಕೆಯ ಅಂದ್ರೆಯೇ ಇಂದ್ರ ಲೋಕ; ಸಿಡುಸಿಡೇ ಸಾಕ್ಷಾತ್ ನರಕ....ಹೇಳಿದನು ನಮ್ಮ ಕೊರವಂಜಿ ಕಾಯುವಪರಂಜಿದೇವಾ!

** ಯುದ್ಧ ಸಾಮಗ್ರಿ **

" ನಶ್ಯಂ ನಾಜಿವಿನಾಶಕಂ ಜಗತಲೇ........" ಇತ್ಯಾದಿಯಾಗಿ ಒಂದು ಶ್ಲೋಕ ಮಾಡಬಹುದು. ಏಕೆಂದರೆ, ಬ್ರಿಟಿಷ್ ಸಾಮ್ರಾಜ್ಯವನ್ನೆಲ್ಲ ರಣೋನ್ಮತ್ತತೆಯಿಂದ ಹುರಿದುಂಬಿಸಿ ನಾಜೀ ಧ್ವಂಸಕ್ಕೆ ಪ್ರೇರೇಪಿಸಿದ ಚರ್ಚಿಲ್ ಮಹಾಶಯನಿಗೆ, ಸಿಗಾರಿನ ಹೊಗೆ ಎಷ್ಟು ಸ್ಫೂರ್ತಿದಾಯಕವಾಗಿತ್ತೋ, ಅಷ್ಟೇ, ಜ್ಯೋತಿಯನ್ನು ಏಕೆ, ಹೊಗೆಯಿಂದಲೂ ಆಗದ ಸಾಹಸವನ್ನೂ ಶಾಂತಿಯನ್ನೂ ಕೊಡುತ್ತಿದ್ದದ್ದು....ನಶ್ಯ ! ಇನ್ನು ಮುಂದೆ ನಶ್ಯೋಪಾಸಕರು ಯಾರೂ ಮೂಗು ಮುಚ್ಚಿಕೊಂಡು, ಡಬ್ಬಿಗಳನ್ನು ಸೊಂಟದಲ್ಲಿ ಮರೆಮಾಚಿಕೊಂಡು, ಸಂದುಗೊಂದುಗಳಲ್ಲಿ ಶೀನುತ್ತಾ ಸುತ್ತಬೇಕಾಗಿಲ್ಲ. ಈಗ ಅಖಿಲ ಪ್ರಪಂಚ ಶಾಂತಿ ಸಮಿತಿಯಲ್ಲಿ ಅಮೆರಿಕನ್ ಪ್ರತಿನಿಧಿಯಾಗಿರುವ ಸ್ಟೆಟಿನಿಯಸ್‌ರವರು ಚರ್ಚಿಲ್‌ರ "ನಾಸಿಕಾ ಪ್ರಕರಣ"ವನ್ನು ಈ ರೀತಿ ವಿವರಿಸುತ್ತಾರೆ. "೧೯೪೩ ಜೂಲೈ ೧೫ ಮಧ್ಯಾಹ್ನ ೧-೩೦-ನಮ್ಮ ಊಟ ಮುಗಿದ ಕೂಡಲೇ, ಮಿಸೆಸ್ ಚರ್ಚಿಲ್‌ರವರು ನಮ್ಮಿಬ್ಬರನ್ನೂ ಮಾತನಾಡಲು ಬಿಟ್ಟು, ಮೆಲ್ಲಗೆ ಎದ್ದು ಹೊರಟರು. ಅಮೇರಿಕದಿಂದ ನಾವು ಕಳುಹಿಸಬೇಕಾದ ಶಸ್ತ್ರಾಸ್ತ್ರಗಳ ವಿಷಯವಾಗಿ ಚರ್ಚಿಲ್‌ರವರು ಮಾತು ಪ್ರಾರಂಭಿಸಿದರು. ಮಾತಾಡುತ್ತಿದ್ದಾಗಲೇ, ಅವರು ಒಂದು ಹಳೆಯ ಬೆಳ್ಳಿ ಡಬ್ಬಿಯನ್ನು ಹೊರಕ್ಕೆಳೆದು, ನನ್ನ ಕಡೆಗೆ ನೀಡಿದರು. ಅದನ್ನು ತೆಗೆದುಕೊಂಡು ನಾನು ತೆರೆದೆ. ಒಳಗೆ ಯಾವುದೋ ಕೊಂಚ ಕಪಿಬಣ್ಣದ ಪುಡಿ ಇತ್ತು. ಏನಿದು, ಎಂಬ ನನ್ನ ಸನ್ನೆಗೆ ಅವರು, "ನಶ್ಯ ! ಹಾಕಿ ಕೊಂಚ" ಅಂದರು. ನಾನು, ಬೇಡ, ಎಂದೆ. ಆದರೆ, ಅವರು ಅದರೊಳಗೆ ಬೆರಳಿಟ್ಟು ಒಂದು ಚಿಟಿಕೆ ತೆಗೆದು ಮೂಗಿಗೇರಿಸಿ ಮೆಲ್ಲಗೆ ಶೀತಾಗ, ಅದರ ಆನಂದ ನನ್ನ ಅಸೂಯೆಯನ್ನು ಕೆರಳಿಸಿತು. ಒಂದು ಚಿಟಿಕೆ ಎಳೆದೇಬಿಡೋಣ ಎನಿಸಿತು. ತೆಗೆದುಕೊಂಡೆ, ನಾನು ಯೋಚಿಸಿದಷ್ಟು ಅವಾಂತರದ ಅರ್ಥಕೂಡ ಆಗಲಿಲ್ಲ. ಚೆನ್ನಾಗಿತ್ತು !....ಶಾಂತಸಾಗರ, ಚೀಣಾ, ಇಂಡಿಯಾ, ಮೆಡಿಟರೇನಿಯನ್, ರಷ್ಯ, ಈ ಭೂಭಾಗಗಳಿಗೆಲ್ಲ ಶಸ್ತ್ರಾಸ್ತ್ರಗಳನ್ನು ರವಾನಿಸುವ ಮಹಾಸಮಸ್ಯೆಗಳನ್ನು ಅನಂತರ ನಾವು ಅನೇಕ ಗಂಟೆಗಳ ಕಾಲ ಚರ್ಚಿಸಿದೆವು............" ಆದ್ದರಿಂದ, ನಮ್ಮ ನಶ್ಯರತಿಗಾಗಿ ನಾವು ಕೊರಗಬೇಕಾಗಿಲ್ಲ-ಹೆಮ್ಮೆ ಪಡೋಣ.




ದಸರಾ ವಸ್ತು ಪ್ರದರ್ಶನದಲ್ಲಿ

— ನಶ್ಯಿ —

ಚಿತ್ರ ಶಿಲ್ಪಿಯು

ಕಂಡ ವಸ್ತು ಪ್ರದರ್ಶನದ ದೃಶ್ಯಗಳು.





ಗಿದ್ದಿದ್ದರೆ!

(ಶಿಶುಗೀತೆ)

ಅಮ್ಮಾ! ನೀನು ಕುಳ್‌ಕುಳ್ಳಾಗಿ
ಪುಟಾಣಿ ಪಾಪನಾಗಿದ್ದಿದ್ದರೆ
ನಾನೇ ಹೀಗೆ ಟೊಳ್‌ಟೊಳ್ಳಾಗಿ
ಧಡೂತಿ ಹೆಂಗಸಾಗಿದ್ದಿದ್ದರೆ—
ಸುಮ್ನೆ ನಿನ್ನ ಕೆಟ್‌ಕೆಟ್‌ದಾಗಿ
ಕೂಗೋದ ರೇಗೋದ ಬಿಟ್ಟುಬಿಡುವೆ.
ಪಾಪೂ, ಪುಟ್ಟು, ಜಾಣೆ, ಬಾರೆ,—
ಮುದ್ದಾಡಿ ಕರೆಯುವೆ, ದಿನದಿನವೂ.
ಕೋಣೆ ತುಂಬ ಗೊಂಬೆ ಹರಡಿ
ಸರೋಜಿ, ಆಡುಬಾ, ಎಂದೆನ್ನುವೆ.
ಕಯ್ಯೊ ಕಾಲೊ ಕಿವಿಯೊ ಮೂಗೊ
ಮುರಿದರೆ ಮುರಿಯಲಿ, ಮುದ್ದಿಡುವೆ.
ಬೆಳಗೆ ಸಂಜೆ ಸದಾ ನಿನಗೆ
ಮುಚ್ಚೋರೆ ಕಾಯೊಬ್ಬಟ್ಟಾ ಕೊಡುವೆ
ಹೋಗೆ! ಸಾಕು! ತಿಂಡಿಪೋತಿ,
ಎನ್ನುತ ನಿನ್ನ ನಾ ದಬ್ಬೋದಿಲ್ಲ.
ಹೊಟ್ಟೆನೋವು, ವಾಂತಿ, ಭೇದಿ—
ಹೆದರಿಸಿ ಸುಮ್ಮನೆ ಬೆದರಿಸೆ ನಾ.
ಪೇಟೆ ಗೀಟೆ ರೈಲು ಗೀಲು—
ಹೊರಟಾಗೆಲ್ಲ ನೀ ಜೊತೆಯಲಿ ಬಾ.
ಹೂವು, ದಾರ, ಹಣ್ಣು, ಪಿನ್ನು—
ಬೇಕಾದ್ದೆಲ್ಲವ ಕೊಂಡ್ಕೊಡುವೆ.
ದಿನವೂ ನಿನಗೆ ಜಂಪರ್ಲಂಗ
ಚಿಕಾಣಿಚಿಕ್ ಚಿಕ್ಕೊಲ್ಕೊಡುವೆ.
ಅಯ್ಯೋ ಪಾಪ ಅರಿಯದ ಕೂಸು
ಹರಿದರೆ ಹೊಸದೇ ತಿಕ್ಕೊಡುವೆ.

ಓದಿ ಬರೆದು ಲೆಕ್ಕ ಮಾಡಿ—
ಮಗುವಿನ ಆರೋಗ್ಯ ಹಾಳಾಯಿತು.

ಅಜ್ಜೀ, ಕೊಂಚ ಇವಳನು ಕೂರಿಸಿ,
ತಮಾಷೆ ಕಥೆಗಳ ಹೇಳಿಂಚೆ.

ಅಮ್ಮಾ ನೀನು ಕುಳ್ ಕುಳ್ಳಾಗಿ
ಸರೋಜ ಪಾಪನಾಗಿದ್ದಿದ್ದರೆ,

ಚಿನ್ನಾ, ನೀನು ಕೇಳಿದ್ದೆಲ್ಲವ
ಕೋ! ಕೋ! ಎನ್ನುವೆ ತುಂತುಂಬಾ!

ನಾನೇ ಈಗಲೆ ಟೊಳ್ ಟೊಳ್ಳಾಗಿ
ಧಡೂತಿ ಹೆಂಗಸು ಆದೇನೆ?

ನೀನೇ ಕೊಂಚ ಒಳ್ಳೇವಳಾಗಿ
ಎತ್ತಿ ಮುದ್ದಾಡಿಸಬಾರ್ದೇನೆ?

(ಸಿಡ್ನಿ ಡೆಯರ್‌ಕೃತಾಂಗ್ಲಕವನಭಾವವಿಸ್ತರಣ).

"ವಿಕಟವಿನೋದಿನಿ" ವಿಶೇಷ ಸಂಚಿಕೆ

ಹೊಟ್ಟೆ ಬಟ್ಟೆಗಿಲ್ಲದ ನಮ್ಮ ದೇಶದಲ್ಲಿ ಪತ್ರಿಕೆಗಳು ಬದುಕುವುದು ದುಸ್ಸಾಧ್ಯವೇ ಹೌದು. ಆದರೂ ಇಳ ವರ್ಷಗಳು ಅವಿಚ್ಛಿನ್ನವಾಗಿ ನಡೆದು ಬಂದ 'ವಿಕಟ ವಿನೋದಿನಿ'ಯನ್ನು ನೋಡಿದರೆ ಉಳಿದವರಿಗೆ ಧೈರ್ಯ ಬರಲೇಬೇಕು. ಧೈರ್ಯದಿಂದ ಧ್ಯೇಯವನ್ನು ಬಿಡದೆ ಮುಂದುವರೆದರೆ, ಸಾಕ್ಷಾತ್ಕಾರವು ಖಂಡಿತ ಎನ್ನುವುದಕ್ಕೆ ಇದು ನಿದರ್ಶನ.

ಈ ತುಂಬು ಸಂಚಿಕೆಯಲ್ಲಿ ಹಲವಾರು ಲೇಖನಗಳಿವೆ. ಆದರೆ ವಿಶೇಷ ಸಂಚಿಕೆಯಲ್ಲಿ ಹಾಸ್ಯರಸ ಒಂದಕ್ಕೇ ಅಲ್ಲದೆ ಮಿಕ್ಕ ರಸಗಳ ಪೋಷಣೆಯೂ ಸಾಕಷ್ಟು ನಡೆದಿದೆ. ಇನ್ನು ಮುಂದೆ ವ್ಯಂಗ್ಯ ಚಿತ್ರಗಳಿಗೆ ಹೆಚ್ಚು ಬೆಂಬಲ ಕೊಟ್ಟರೆ ಇನ್ನೂ ಆಕರ್ಷಣೀಯವಾಗಬಹುದೆಂದು ಹೇಳಬಯಸುತ್ತೇವೆ.

ವಿಕಟ ವಿನೋದಿನಿಯು ಇತೋಪ್ಯತಿಶಯವಾಗಿ ಬಾಳಿ ಬೆಳಗಲಿ. ಅದರ ಓದುಗರಿಗೆ ಶಾಂತಿ ನಗೆ ಸುಖಗಳನ್ನು ಕೊಡಲಿ, ಎಂದು ಮನಸಾರೆ ಹಾರೈಸುತ್ತೇವೆ.

ಈ ದುರ್ಭಿಕ್ಷ ಕಾಲದಲ್ಲಿ ಇಷ್ಟು ಅಂದವಾಗಿ, ಇಷ್ಟು ಹೊರವಾಗಿ ಈ ಸಂಚಿಕೆಯನ್ನು ಹೊರತಂದ ಸಂಪಾದಕ ವ್ಯವಸ್ಥಾಪಕರಿಗೆ ನಮ್ಮ ಅನಂತ ವಂದನೆಗಳು.

ಗುಮಾಸ್ತೆಯ ಸೇಡು

ಅಸಿಸ್ಟೆಂಟ್ ಸೆಕ್ರಟರಿ ಅಪ್ರಮೇಯರಾಯರು ಮೊನ್ನೆ ಗುಮಾಸ್ತೆ ಕೋದಂಡುವನ್ನ ಹುಚ್ಚಾಪಟ್ಟೆ ಅಂದೇಬಿಟ್ಟರು. ಯಾವುದಕ್ಕೋ ಏನೋ ಅವನು ಸಾಹೇಬರ ರೂಮಿಗೆ ನುಗ್ಗಿದ್ದೇ ತಡ, ಒಳ್ಳೇ ತೋಳ ಕೂಗಿದ ಹಾಗೆ ಕೂಗೇಬಿಟ್ಟರಂತೆ. 'ಗೆಟ್ ಔಟ್' ಅಂತ ಒಂದೇಸಮನೆ ಕಿರಿಚಿದರಂತೆ. ಪಿತ್ರ ಪೌತ್ರ ಸಹಿತವಾಗಿ ದೂಷಣೆ ಮಾಡಿದರಂತೆ.

ಕೋದಂಡುವಿಗೂ ಮೂಗಿನ ತುದಿ ತನಕ ಕೋಪ ಉಕ್ಕಿ ಬಂತಂತೆ. ಆದರೂ, ಅದನ್ನ ಒಳಕ್ಕೆಳೆದುಕೊಂಡು ಮನೆಗೆ ಹೋದ. ಎಂದೆಂದಿಗೂ ನೆನೆದುಕೊಳ್ಳುವಂತಹ ಒಂದು ಪಾಠವನ್ನು ರಾಯರಿಗೆ ಕಲಿಸಬೇಕೆಂದು ಸಂಕಲ್ಪಮಾಡಿಕೊಂಡ. ರಾತ್ರಿಯೆಲ್ಲ ನಿದ್ದೆ ಕೆಟ್ಟ.

ನಿನ್ನೆ ಅವಸರ ಅವಸರವಾಗಿ ಆಫೀಸಿಗೆ ಬಂದ. ನೆಟ್ಟಗೆ ಸಾಹೇಬರ ರೂಮಿಗೇ ನುಗ್ಗಿದ. ಸಾಹೇಬರ ಕುರ್ಚಿಯಲ್ಲೇ ಕೂತ. 'ಬರಲಿ, ಭೂಪ', ಅಂತ ಹಲ್ಲು ಕಚ್ಚಿದ.

ವಾರಕ್ಕೊಂದು ಸಲ ಮಾತ್ರ ಕೋಣೆ ಗುಡಿಸುವ ಜವಾನರು ತಮ್ಮ ತಮ್ಮ ಪಾಲಿನ ರೂಮುಗಳನ್ನು ತೆರೆದಿಟ್ಟು, ಆಗಲೇ ಹೊಸಲಲ್ಲಿ ಮಾಮೂಲಿನಂತೆ ನಿದ್ದೆ ಹೊಡೆಯುತ್ತಿದ್ದರು. ಆದ್ದರಿಂದಲೇ ಕೋದಂಡುವಿನ ಪಿತೂರಿ ನಿರ್ವಿಘ್ನವಾಗಿ ಪ್ರಾರಂಭವಾದದ್ದು.

ಸಾಹೇಬರು ಒಳಕ್ಕೆ ಬರುತ್ತಲೂ, "ಯಾರ್ದೋ ಅದು, ಹಾಳು ಮುಸುಡಿ? ಗೆಟ್ ಔಟ್" ಅಂತ ಕೂಗೇ ಬಿಡೋದು! ಅವರು ರೇಗಾಡಿ ಆರ್ಭಟಿಸುವಾಗ, ಕಿಸೆಯೊಳಗಿಂದ ರಾಜಿನಾಮೆ ಕಾಗದ ತೆಗೆದು ಅವರ ಮುಖಕ್ಕೆಸೆದು ಜೋರಾಗಿ ನಕ್ಕು, ಹೊರಟೇಬಿಡೋದು—ಇದೇ ಕೋದಂಡು ಪಿತೂರಿ; ಅವನ ಮಾನಸಂರಕ್ಷಣದ ಉಪಾಯ.

'ಗೆಟ್ ಔಟ್' ಎಂಬ ಆ ಎರಡು ಮಾತುಗಳಲ್ಲಿ ಆದಷ್ಟು ಆಕ್ರೋಶವನ್ನು ತುಂಬಿ ಉಚ್ಚರಿಸಲು ಅವನು ದಾರಿಯುದ್ದಕ್ಕೂ ರಿಹರ್ಸಲ್ ನಡೆಸಿದ್ದ.

೧೧.೪೫........ಯಾರದೋ ಕಾಲಸಪ್ಪಳ. ಬೂಟ್ಸು ಕಾಲು. ಶೀಮೆ ಚರ್ಮ. ...ರೂಮಿನ ಅರೆಬಾಗಿಲಿನ ಮೇಲೆ ಅಪ್ರಮೇಯರಾಯರ ಬಲಗೈ. ಅವರೇ ! ಅದನ್ನು ನೂಕಿ ಒಳಗೆ ಪ್ರವೇಶಮಾಡುವುದಕ್ಕೆ ಹವಣಿಸುತ್ತಿದಾರೆ....ಬಾಗಿಲನ್ನು ತೆರೆದರು. ಕಾಣಿಸಿಕೊಂಡರು. ಕೋದಂಡು ಕಾದಿದ್ದ ಮುಹೂರ್ತ ಕೈಗೂಡಿತು.

ಕೋದಂಡುವಿನ ಗಂಟಲು ಒಳ್ಳೇ ಹದದಲ್ಲಿತ್ತು. "ಯಾರದೋ ಅದು ? ಹಾಳು ಮುಸುಡಿ ! ಗೆಟ್‌ಔಟ್ !" ಅಂತ ಅವನು ಕಂಠಪೂರ್ತಿ ಬೊಗುಳಿದ.

ಆ ಶಾಪ ಕಿವಿಯನ್ನು ತಾಕಿದ ಕೂಡಲೇ, ಸಾಹೇಬರು 'ಡಂಗಾ'ದರು. "ಕ್ಷಮಿಸಿ, ಸಾರ್" ಅಂತ ಹೇಳುತ್ತಾ, ಅವರು ಹೊರಟೇಹೋದರು. ಬಾಗಿಲು ತಾನಾಗಿಯೇ ಮುಚ್ಚಿಕೊಂಡಿತು.

ಕೋದಂಡುವಿಗೆ ಆಶ್ಚರ್ಯವಾಯಿತು. 'ಕ್ಷಮಿಸಿ, ಸಾರ್' ಅಂತ ಆತ ಯಾಕೆ ಹೇಳಿದ ? ಎಲಾ ಹೇಡಿ ! ನನ್ನ ಶಾರೀರಕ್ಕೇನೆ ಹೆದರಿಕೊಂಡು ... ಅಂತ ಯೋಚನೆ ಮಾಡುತ್ತಾ, ಮೇಜಿನ ಮೇಲಿದ್ದ, ಕಾಗದದ ಕಟ್ಟುಗಳನ್ನು ನೋಡಿದ ! ....

"ಅಯ್ಯೋ !" ಎಂದು ನಿಟ್ಟುಸಿರುಬಿಡುತ್ತಾ, ಕೋದಂಡು ಆ ಕೋಣೆಯೊಳಗಿಂದ ಹೊರಕ್ಕೆ ನೆಗೆದು, ತನ್ನ ಆಫೀಸಿನೊಳಹೋಗಿ, ತನ್ನ ಮೇಜಿನ ಪಕ್ಕದಲ್ಲಿ ಕೂತು, ಬೆವರೊರಸಿಕೊಂಡ !........

ಏಕೆಂದರೆ, ಕೋದಂಡು ಕೂತಿದ್ದ ರೂಮು ಅಪ್ರಮೇಯರಾಯರ ಆಫೀಸ್ ರೂಂ ಅಲ್ಲ ! ಅದರ ಆಚೆ ಪಕ್ಕದ್ದು, ಸೆಕ್ರಟರಿ ಅಣ್ಣಪ್ಪರಾಯರದು ! "ಕ್ಷಮಿಸಿ, ಸಾರ್" ಅಂತ ಸಾಹೇಬರು ಹೇಳಿದ್ದು ತನಗಲ್ಲ, ಅವರ ಸಾಹೇಬರಿಗೆ !




“ !! .. ಚೂರಿಚಾಮ !!.... ಅಯ್ಯೋ ನಾನು.... ಗೊತ್ತಾಗೋದಿಲ್ವೆ ?....
ಸಾರ್ಣಪ್ಪ, ನಿನ್ನ ಲಾಯರ್.... ಅಯ್ಯೋ........”

ಮೂರ್ಛೆ

ಹರಟೆ ಕೊಚ್ಚುತಲಿದ್ದೆವು ನಾವೊಮ್ಮೆ
ನಾನು, ರಂಗ, ಶಿವರಾಮು, ಕಿಟ್ಟಿರಿತ್ಯಾದಿ.
ಆಮಾತು, ಈಮಾತು ಎಲ್ಲ ಮಾತುಗಳಾಗಿ,
ಕಡೆಗೆ ನುಡಿದೆನು ನಾನು.
" ಇಲ್ನೋಡು ಶಿವರಾಮು, ಅಚ್ಚರಿಯನೇನೆಂಬೆ
ಅಣ್ಣ ನೋಡುತಲಿದ್ದ ನಿನ್ನೆ 'ರಾಮಲಕ್ಷ್ಮಣ ಜನನ'ವನು.
ಹೆರಿಗೆಯಾಯಿತು ಅತ್ತಿಗೆಗಿಂದು. ಆಶ್ಚರ್ಯ.
ಅಣ್ಣನವಳಿ ಗಂಡುಗಳ ತಂದೆ ಇಂದಿನಿಂದೆ."
" ಅದೇನಾಶ್ಚರ್ಯ? ವೆಂದನು ಶಿವರಾಮು
ನೆರೆಮನೆಯ ರಾಯರನು ಕಂಡಿರುವೆಯಷ್ಟೆ.
ಒಮ್ಮೆ ಅವರ ಪತ್ನಿ-ತುಂಬುಗರ್ಭಿಣಿಯನು
ಹೆರಿಗೆಯಾಸ್ಪತ್ರೆಗೆ ಸೇರಿಸಿದರಂತೆ, ರಾಯರಿಗೆ
ಪುಸ್ತಕಗಳೆನೆ ಪಂಚಪ್ರಾಣ! ಆಸ್ಪತ್ರೆಯಾ
ಹೊರವಾರ್ಡಿನಲಿ ಕುಳಿತು 'ತ್ರಿಮೂರ್ತಿ'ಯೆಂಬಾ
ಕಾದಂಬರಿಯೊಳು ತಲ್ಲೀನರಾಗಿರ್ದರಂತೆ,
ನಡುರಾತ್ರಿಯಾಯಿತು, ರಾಯರಿಗೆ ಎಚ್ಚರವೆಯಿಲ್ಲ.
ನರ್ಸು ಏದುತ್ತ ತೇದುತ್ತ ಬಂದು ನುಡಿದೆಬ್ಬಿಸಿದಳು
ರಾಯರನು " ರಾಯರೇ, ಮೂರು ಮಕ್ಕಳ ತಂದೆ ನೀವಿಂದು
ಭಾಗ್ಯಶಾಲಿಗಳು ನೀವಿಂದು, ಯಾರಿಗಿಹುದೀಭಾಗ್ಯ ?'
ಶಿವರಾಮು ಕಥೆಯನು ಕೇಳಿ ಕೆಳಗುರುಳಿದನು ರಂಗ
ಮೂರ್ಛೆ! ಶೈತ್ಯೋಪಚಾರಗಳ ನಡೆಸಿದೆವು.
ತಣ್ಣೀರ ತಟ್ಟಿದೆವು, ಬೀಸಣಿಗೆ ಬೀಸಿದೆವು.
ರಂಗ ಮೆಲ್ಲನೆ ಎದ್ದ, ಗೋಳಿಡುತ. 'ಅಯ್ಯೋ' ಎನುತ
ಏನೋ, ಏಕೋ, ರಂಗ, ಏನಾಯಿತೋ ? ಎನೆ
ಹಲುಬುತಲಿ ನುಡಿದ, 'ಅಕಟಕಟ ! ಏಗೆಯ್ಯೆ,
'ಡೀ. ವೀ. ಯವರ "ನವಭಾರತಜನನ" ನಾನೋದುತಿಹೆ
ನಲ್ಲೊ !'

—ಡಿ. ವೆಂಕಟೇಶಮೂರ್ತಿ,
ಹೈದರಾಬಾದು (ದಕ್ಷಿಣ).


ಘಂಟೆ ಎಷ್ಟು ಸಾರ್
ಏ:ಣೌನೆ? ನಂಗೆ ಬಾ ಪ್ಲೋ:ಕೆ ಬರೋಲ್ಲ ಸ್ವಾಮಿ
①


ನಿಮಗೆ ಏ:ನ್ ಬಾ ಪ್ಸಾ ಕೆ ಬರುತ್ತೈ?
ಘಂಟೆ, ಹತ್ತು ಕಾಬು
R.K. Laxman
②

ರಾಜೀವಪುರದಲ್ಲಿ ರಾಯ ಬಹದ್ದೂರರಂತೆ

———o———

ರಾಜೀವಪುರದಲ್ಲಿ ಗುಲ್ಲೋಗುಲ್ಲು. ಗಜಿಬಿಜಿಯೋ ಗಜಬಿಜಿ. ಗುಂಪೋಗುಂಪು. ಕಾರಣ ನಾಡಹಬ್ಬ. ನಾಡಹಬ್ಬದ ಗಲಾಟೆಯನ್ನು ತಮ್ಮ ತಮ್ಮ ಕೆಲಸಕ್ಕೆ ಸರಿ ಹೊಂದಿಸಿಕೊಳ್ಳಲೋಸುಗ, ಸಂಪಾದನೆಮಾಡಲೋಸುಗ, ಹಲವಾರು ಜನರು, ಹಸ್ತ ಸಾಮುದ್ರೀಕರು, ನಕ್ಷತ್ರವೀಕ್ಷಕರು, ತಾರಾಮುಖ ತರುಣರು, ನಾಟಕ ಕಂಪೆನಿ ಯವರು, ಸರ್ಕಸ್ಸಿನವರು ಹಾಗೂ ರಾಜಕಾರಣ ಪಟುಗಳು ಬಂದು ತಮ್ಮ ತಮ್ಮ ಗುಡಾರಗಳನ್ನು ಏರ್ಪಡಿಸುವರು.

ಈ ಸಾರಿ ರಾಜೀವಪುರದಲ್ಲಿ ಎಂದಿನಂತೆ ನಾಡಹಬ್ಬ. ಆದರೆ ಎಂದೂ ಇಲ್ಲದ ಜನಸಂದಣಿ. ಅಲ್ಲಿ ಇಲ್ಲಿ, ಅದು ಇದು, ಹರಟೆ ಒಂದು ರೀತಿಯಾಗಿ ಹೆಸರು ಪಡೆದ ರಾಯಬಹದ್ದೂರರು ತಮ್ಮ ಶಿಬಿರವನ್ನೂ ಏರ್ಪಡಿಸಿದರು. ಸಾಕಷ್ಟು ಬಾಜಾ ಬಜಂತ್ರಿ, ತಾಮ್ ತಾಮ್ ಹೊಡೆಸಿ ಒಂದು ಸಾರ್ವಜನಿಕ ಭಾಷಣ ಮಾಡಿದರು. ಈ ಬ್ರಾಹ್ಮಣಭೀಷಣ ಭಾಷಣದಲ್ಲಿ ಅವರ ವಾದ ಸರಣಿಯೇ ಸರಣಿ, ದೇಶ ಪರಿ ಜ್ಞಾನವೇ ಪರಿಜ್ಞಾನ, ಮುಖ್ಯ ಗಜ ಮೋಹಕ. (ಮುದ್ರಾರಾಕ್ಷಸನಲ್ಲ).

“ ಹಿಂತುಳಿಯಲ್ಪಟ್ಟ ನಾವುಗಳು ಏಕೆ ಹಿಂದಿದ್ದೇವೆ ಗೊತ್ತೆ. ನಾವು ಹಿಂದು ಗಳು ಅದಕ್ಕಾಗಿ. ಹಿಂದುಗಳೆಲ್ಲರೂ ಬ್ರಾಹ್ಮಣ, ಬನಿಯ ಇವರಿಬ್ಬರಿಂದ ಮೆಟ್ಟಲ್ಪಟ್ಟಿ ದ್ದಾರೆ. ನಾವು ಮುಂದುವರಿಯಬೇಕಾದರೆ ಈ ದಿಗ್ಬಂಧನವಾದ 'ಹಿಂದೂ'ಮತ ದಿಂದಲೇ ಹೊರಬೀಳಬೇಕು.”

ಬುದ್ಧಿವಂತ ! ಹಿಂದೂತನದ ಬಾಳ ಕರವಾಳದಂತಿರುವ ಕ್ಷತ್ರಿಯರು, ಬೆನ್ನು ಮೂಳೆಯಂತಿರುವ ಶೂದ್ರರನ್ನೂ ಮರೆತುಬಿಟ್ಟ. ಹಾಗಿಲ್ಲದಿದ್ದರೆ, ಕ್ಷತ್ರಿಯ ಶೂದ್ರರು, ಇಬ್ಬರೂ ರಾಯ ಬಹದ್ದೂರರಿಗೆ ಕಾಯ ಅಲ್ಪ ಮಾಡಿಸುತ್ತಿದ್ದರು. ಸಾಧು ಬ್ರಾಹ್ಮ ಣರು, ಶಾಂತಿ ಸ್ವರೂಪಿ ವ್ಯಾಪಾರಿಗಳು ಯಾರ ಗೊಡವೆಗೂ ಹೋಗರು.

* * *

ಈ ಭಾಷಣಕ್ಕೆ ಸೇರಿದ್ದ ಪ್ರಚಂಡ ಸಭೆಯ ಸುದ್ದಿಯು ಮಲಯಾಳದ ತನಕ ಹೋಯಿತು. ಅಲ್ಲಿನ ವಾತಾವರಣ ಬಹಳ ಬಿಸಿಯಾಗಿ ಮಾರ್ಪಟ್ಟಿತ್ತಂತೆ. ಎಲ್ಲರ ವಿದ್ಯಾಭ್ಯಾಸವನ್ನೂ ಸರ್ಕಾರವೇ ಏರ್ಪಡಿಸಿತಂತೆ. ಹಾಗಾಗಿ ವಿದ್ಯಾಭಾಸ ಮಾಡಿಸು ತ್ತಿದ್ದ ಹಲವಾರು ಯೇಸುದಾಸರಿಗೆ ತಲೆನೋವು ಕಂಡಬರುವಂತಾಗಿತ್ತಂತೆ. ರಾಜೀವ ಪುರದ ಭಾಷಣದ ಸುದ್ದಿ ಕೇಳಿದಾಗ ಯೇಸುದಾಸರೆಲ್ಲರೂ ನೇರವಾಗಿ ಅಲ್ಲಿಗೇ

ಬಂದರಂತೆ. ಬಂದವರೇ ಸಭೆ ಸೇರಲು ಊರ ಹಿರಿಯನ ಬೆಂಬಲ ಪಡೆದರಂತೆ. ಬೆಂಬಲ ಪಡೆದು, ಹಿಂದೂ ಮತದಿಂದ ಹೊರಬೀಳಲುದ್ಯುಕ್ತರಾಗುವವರನ್ನೆಲ್ಲಾ ಆತುಕೊಳ್ಳಲು ಸಕಲ ಸಿದ್ಧತೆಗಳನ್ನೂ ಮಾಡಿಕೊಂಡರಂತೆ. ಮೊದಲಾಗ ಹತ್ತು ಸಹಸ್ರ ಹೆಣ್ಣು ಗಂಡು ಹೆಸರಿನ ಪಟ್ಟಿಯನ್ನು ತಯಾರಿಸಿ, ಅವರಿಗೆಲ್ಲರಿಗೂ ವಿಳಂಬ ವಾಗದೆ ನಾಮಕರಣಮಾಡಲು ಸಿದ್ಧರಾದರಂತೆ. ಎಲ್ಲೆಲ್ಲಿ ಯೇಸು ನಿಲಯಗಳನ್ನು ಕಟ್ಟಬಹುದು ಎಂದು ಯೋಜಿಸಿದರಂತೆ. ಏನು ಮಾಡಿದರೂ ಅಲ್ಪ ಸಂಖ್ಯಾತರೇ ಆಗುವುದು ಖಂಡಿತ, ಆದ್ದರಿಂದ ಅಲ್ಪ ಸಂಖ್ಯಾತರ ಹಕ್ಕುಬಾಧ್ಯತೆಗಳನ್ನು ಕಾಯುವೋಸುಗ ಕಾನೂನುಗಳನ್ನೂ ಮಾಡಿಸಲೆತ್ನಿಸಿದರಂತೆ. ಅಷ್ಟರಲ್ಲೇ ಕೆಲವರು 'ನಾವು ಹಿರಿಯ ಅಲ್ಪ ಸಂಖ್ಯಾತರು, ನಮ್ಮದೇ ಬೇರೆ ಜನಾಂಗ, ನಾವು ಬೇರೆ ಸರ್ಕಾರವನ್ನೇ ಅಪೇಕ್ಷಿಸಬೇಕು' ಎಂದು ಪ್ರಗತಿಗಾಮಿಗಳಾದರಂತೆ.

ಮುಖ್ಯ ಹಿಂದೂಮತದಿಂದ ಹಿಂದೆ ಬೀಳುವ ಜನರನ್ನೆಲ್ಲಾ ತಮ್ಮ ಗುಂಪಿಗೆ ಸೇರಿಸಿಕೊಂಡು, ತಾವೂ ಬಲಾಢ್ಯರಾಗಲು ಸಾಕಷ್ಟು ಯೋಜನೆಗಳನ್ನು ಮಾಡ ಹೊರಟರಂತೆ.

* * *

ಈ ಸುದ್ದಿಗಳೆಲ್ಲವೂ ಪಂಚ ಆಪದ ಪುಣ್ಯಭೂಮಿಗೆ ಹರಡಿತಂತೆ. ಮೊನ್ನೆ ಮೊನ್ನೆ ತನಕ, ಜೀನೂಭಾಯಿ, ಎರಡು ತಲೆ ಮಾರಿನ ಹಿಂದೆ ಹಿಂದೂ ಬನಿಯಾ ಆಗಿದ್ದು ಇತ್ತೀಚೀಚೆಗೆ ಬೇರೆ ಜನಾಂಗವಾದ ಹಿರಿಯರೆಲ್ಲರೂ ತಮ್ಮ ತಮ್ಮ ದಾಡಿ ನೀವಲು ಆರಂಭಿಸಿದರಂತೆ. ಅರರೆ! ಇಷ್ಟು ಜನ ಹಿಂದುಗಳು, ರಾಯ ಬಹದ್ದೂರ ರನ್ನು ಹಿಂಬಾಲಿಸಿ ಅನಾಯಾಸವಾಗಿ ಯೇಸುದಾಸರ ಪಾಲಾಗುತ್ತಾರಲ್ಲ. ನಾವೇ ನಾದಗೂಮಾಡಿ ನಮ್ಮ ದುಸರಾ ಜನಾಂಗಕ್ಕೆ ಸೇರಿಸಿಕೊಳ್ಳಲೇಬೇಕು ಎಂದು ನಿರ್ಧರಿಸಿ, ತಮ್ಮ ಪ್ರತಿನಿಧಿಗಳನ್ನು ಕೂಡಲೇ ರಾಜೀವಪುರಕ್ಕೆ ಅಮಿತ ದ್ರವ್ಯದೊಡನೆ ಕಳಿಸಿದರಂತೆ

ಗೊಂಚಲು ಗೊಂಚಲೇ ಮುಖಂಡರು ಬಂದರಂತೆ ರಾಜೀವಪುರಕ್ಕೆ. ಬಂದು ರಾಜೀವ ಪುರಜನರನ್ನು ಭೇಟಿಮಾಡಿ 'ತಮ್ಮ ಜನಾಂಗಕ್ಕೆ ಸೇರಿದರೆ ಏನೇನು ಪ್ರಯೋಜನವುಂಟು, ಭಾರತ ಸರ್ಕಾರದಲ್ಲಿ ಯಾವ ಅನುಕೂಲಗಳುಂಟು, ರೈಲ್ವೆ, ಅಂಚೆ ಇಲಾಖೆಗಳಲ್ಲಿ ಹೇಗೆ ಮುಂದುವರೆಯಬಹುದು' ಎಲ್ಲವನ್ನೂ ತಿಳಿಸಿದರಂತೆ.

ಪುರಜನರಲ್ಲಿ ಎರಡು ಹಿರಿಯ ಪಂಗಡಗಳಾಯ್ತಂತೆ. ಒಂದು ಪಂಗಡದವರು, ಜನಾಂಗ ಬೇರೆಯಾಗುವುದು ಬೇಡ; ಈ ಯಾತನೆಯೆಲ್ಲಾ ನಮಗೇಕೆ ಎಂದು ರಾಗ ತೆಗೆದರಂತೆ. ಇನ್ನೊಂದು ಪಂಗಡದವರು, ಬೇರೆ ಜನಾಂಗ ಆಗಲೇಬೇಕು;

ನಮ್ಮಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಮುಖ ತೋರಿಸುವ ಹಾಗಿಲ್ಲ. ಅವರೆಲ್ಲರನ್ನೂ ಹರದೆ ಹಿಂದೆ ಹಾಕುವುದಕ್ಕೆ ಇದಕ್ಕಿಂತ ಚೆನ್ನಾದ ಯೋಚನೆ ಇಲ್ಲವೇ ಇಲ್ಲ ಎಂದು ವಾದ ಹೂಡಿದರಂತೆ.

ಇವೆಲ್ಲವನ್ನೂ ಸಮಾಧಾನಪಡಿಸಲು ಇನ್ನೆರಡು ವಾರಗಳಲ್ಲೇ ವಿಶ್ವದಲ್ಲಿನ ದುಸರಾ ಜನಾಂಗ ಮುಖಂಡರನ್ನು ಅದರಲ್ಲೂ, ನಿನ್ನೆ ಮೊನ್ನೆ ತಾನೆ ಹೊಸದಾಗಿ ಸೇರಿದವರನ್ನು ಕರೆಸಿ ಅವರುಗಳಿಂದ ಈ ಯೋಜನೆಯನ್ನು ಮುಂದುವರಿಸಬೇಕೆಂದು ತೀರ್ಮಾನವಾಯ್ತಂತೆ.

*   *   *

ಈ ಗಲಾಟೆಯಲ್ಲಿ, ಹಿಂದುಗಳು ಏನು ಮಾಡುತ್ತಿದ್ದರು ಗೊತ್ತೆ? ಹಿಂದೂತ್ವವನ್ನು ಮೈಗೆಟ್ಟಿರುವ ಎರಡು ಗುಂಪಿನವರೂ ಏನುಮಾಡಿದರು ಎನ್ನುತ್ತೀರಿ?–ಏನೂ ಇಲ್ಲ.–ಹಿಂದೂತ್ವವು ನಮ್ಮ ಏಕೈಕ ಆಸ್ತಿಯಲ್ಲ. ಅದು ಇದ್ದವರ ಭಾಗ್ಯ. ಬೇಡದವರು ಹೊರಹೋದರೆ, ಅವರವರ ಸಂಸ್ಕಾರ. ಇದನ್ನು ಜುಲುಮಿನಿಂದ ನಡೆಸುವುದು ಹಿಂದೂತನವಲ್ಲ ಎಂದು ತಮ್ಮ ಪಾಡಿಗೆ ತಾವಿದ್ದರಂತೆ.

*   *   *

ಆದರೆ, ಆದರೆ–ಈ ಚಳುವಳಿಗೆಲ್ಲಾ, ಉದ್ರೇಕ ಭಾಷಣಗಳಿಗೆಲ್ಲಾ, ಮುಂದೆ ಬಂದು ಸಹಾಯ ನೀಡಿದವರೂ, ಬೆನ್ನಬಲ ಹಾಗೂ ಹೊನ್ನಬಲ ಕೊಟ್ಟವರೂ ಕೂಡ, ಹಿಂದೂಧರ್ಮ ಪ್ರಕಾಶರೇ ಅಂತೆ.

"ದನಗಳ ಅಭಿವೃದ್ಧಿಯ ದೃಷ್ಟಿಯಿಂದ ಎಣ್ಣೆಯನ್ನು ಬಿಟ್ಟು, ಎಳ್ಳು ಬಿಡುವುದನ್ನು ಸಂಪೂರ್ಣ ನಿಲ್ಲಿಸಲಾಗಿದೆ" (ಉತ್ತರ)....ಪಿತೃಗಳಿಗೆ ದ್ರೋಹ ಮಾಡಿದರೆ, ಗೋಮಾತೆಗೆ ಪ್ರೀತಿಯೆ?

*   *   *

ಮೈಸೂರಲ್ಲಿ ಮೀನು ಹಿಡಿಯಲು ಅಗಾಧವಾದ ಸೌಕರ್ಯವಿದೆ (ಹೇಳಿಕೆ) ....ಯಾವ ಮೀನಿಗೆ ಯಾವ ಗಾಳ ಎಂಬುದೇ ತಿಳಿಯದಾಗಿದೆ.

*   *   *

ಲಂಚದ ಸಮಸ್ಯೆ

—o—

ನೀ ಮಾಮುಲೊಳಗೊ, ನಿನ್ನೊಳು ಮಾಮುಲೊ,
ನೀ ರೂಲಿನೊಳಗೊ, ನಿನ್ನೊಳು ರೂಲೊ ?

೧

ಲಂಚ ರುಷುವತ್ತಿನೊಳಗೊ, ರುಷುವತ್ತೊಳು ಲಂಚವೊ,
ಲಂಚ ರುಷುವತ್ತೆರಡು, ಜೋಬಿನೊಳಗೊ ?
ಜೋಬು ಜೋರಿನ ಫಲವೊ, ಜೋರು ಜೋಬಿನ ಫಲವೊ,
ಜೋಬು ಜೋರುಗಳೆರಡು, ಮೇಜಕೆಳಗೋ ?........
ನೀ ಮಾಮು....

೨

ಹಣ್ಣು ಹೂವಿನ ಒಳಗೊ, ಹೂವು ಹಣ್ಣಿನ ಕೆಳಗೊ,
ಹಣ್ಣು ಹೂವುಗಳೆರಡು, ತಟ್ಟೆಯೊಳಗೊ ?
ತಟ್ಟೆ ಬಟ್ಟಲ ಮೇಲೋ, ಬಟ್ಲು ತಟ್ಟೆಯು ಒಳಗೊ,
ತಟ್ಟೆ ಬಟ್ಲುಗಳೆರಡು, ಪೆಟ್ಗಿಯೊಳಗೋ ? ... ನೀ ಮಾಮು....

೩

ಅರ್ಜಿಯೊಳು ನೋಟುಗಳೊ, ನೋಟಿನೊಳಗರ್ಜಿಯೋ,
ಅರ್ಜಿ ನೋಟುಗಳೆರಡು, ಕವರಿನೊಳಗೊ ?
ಕವರಿನೊಳು ಥೈಲಿಯೊ ಥೈಲಿಯೊಳು ಕವರೊ,
ಕವರು ಥೈಲಿಗಳೆರಡು, ಕತ್ತಲೊಳಗೊ ?....ನೀ ಮಾಮು....

———

ಮಂಗಯ್ಯನ ವಚನಗಳು

ಕಾಲೇಜ ಕುರಿಗಳು ನಾವು ! ಪಚನ ವೀರರು, ಮಾತಿನಲಿ ಮಹಡಿಯನುರುಳಿಸುವೆವು. ಸಿಗರೇಟ ಹೊಗೆಯಲಿ ಬ್ರಹ್ಮಾಂಡವನೆ ಆಳುವೆವು. ಕಾಲೇಜ ಗೋಡೆಗಳ, ಚಿತ್ರವೈಖರಿಯಿಂದ ಸಿಂಗರಿಸಿ, ಕಲೆಯಲಿ, ನಾಚಿಪೆವು ಸ್ವಾಮಿ, ಬಸು, ವೆಂಕಟಪ್ಪಗಳ ! ಹಾಡುವೆನು ನುಡಿಗಳ್ಳೈದಾರ, ಸ್ವೀಕರಿಸಿ ಹರಸು ಕಂದನನು, ದೇವರದೇವ ! "ಕಳಚಿದ ಕೊಂಡಿ" ಹಂಪಾಪುರದ ಮಂಗಯ್ಯ ||೧||

ನಾನೊಂದ ಬಗೆದರೆ ದೇವ ನೀನೊಂದ ಬಗೆವೆ. ಮನುಷ್ಯನೊಡನೆ ವಿಧಿ ಕಣ್ಣು ಮುಚ್ಚಾಲೆಯನಾಡುವುದು ! ನೀನರಿತಿರುವೆಯದ ; ತಿಳಿಯಲಸದಳ ನಿನ್ನ ಮನಸಿನ ಆಳ ಹಾಳುಭಾವಿಯಂತಯ್ಯ ! ಮೊನ್ನೆ ಸಂಜೆ ಕಾಲೇಜ ಹಾಲಿನಲಿ ಸೇರಿತು ಬಹಳ ಜನ ! ಕಿಕ್ಕಿರಿದು ತುಂಬಿತ್ತು ಜನ ಸ್ತೋಮ ! ಕೂಗುತ್ತಿದ್ದಿತು ಮೈಕು. ಅಂದು ಚರ್ಚಾಕೂಟ. ಗಂಡು, ಹೆಣ್ಣು, ಸೆಣಕಲರು ಧಾಂಡಿಗರು ಲೆಕ್ಕವಿಲ್ಲದೆ ನುಗ್ಗುತ್ತಿದ್ದರು ಒಳಗೆ, "ಜಾನಕಿಯನರಸಿ ಹೊರಟ ರಾಮನನು ಹಿಂಬಾಲಿಸಿದ **ಸೇನೆ**"ಯಂತೆ. ಪಕ್ಕದಾ 'ಕೊಠಡಿಗ'ನ ಇಸ್ತ್ರಿ ಮಾಡಿದ ಸೂಟ, ಮೂರು ದಿನ ಅಂಗಲಾಚುತ ಬೇಡಿ ತಂದಿದ್ದೆ ; ಧರಿಸಿದ್ದೆ ಠೀವಿಯಲಿ ; ನಡೆದಿದ್ದೆ ಬೆಳೆದ ಹುಂಜನ ತೆರದಿ ; ಹೆಜ್ಜೆಹೆಜ್ಜೆಗು ನನ್ನ ಅಂಗ ಸೌಶ್ಠವ ನೋಡಿ ಹಿಗ್ಗಿ ನಡೆದಿದ್ದೆ. ಮುಗ್ಧೆಯರು ನನ್ನ ರೂಪನು ಕಂಡು ಬೆಚ್ಚುವರು, ಬೆರಗಾಗುವರು, ಎಂದು ಸವಿದಿದ್ದೆ ಮನಸಿನಲಿ ಭ್ರಾಂತಿಯೂ ಜಾಮೂನ, ಭಾಷಣವ ಎಂಟು ದಿನಕ್ಕಿಂತ ಮುಂಚೆ ಬರೆಸಿ ಉರು ಹೊಡೆದಿದ್ದೆ, ವೇದಿಕೆಯ ಮೇಲೆ ಬಂದು 'ರೋಫ'ನಲಿ ನಿಂತೆ ; ಕಟ್ಟಿದಾ ಕಂಠದುರಲನು ಅಕ್ಕಪಕ್ಕಕೆ ಹೊರಳಿಸಿದೆ. ಕಲಕಲ ನಿನಾದದಿಂ ಮೊದಲಾಗಿ, ಮೇಘ ಪಟಲವನೊಡೆವ ಅಣು ಬಾಂಬಿನಂದದಲಿ ಹೊರಟಿತು ಬೆಕ್ಕುನಾಯ್ಗಳ ಕೂಗನನುಕರಿಸಿದಾ ಕೂಗುಗಳು ! ಮಹಾ ಬ್ರಹ್ಮಾಂಡವ ನೊಡೆದು ಭೋರಿಡುತ ನುಗ್ಗಿದ ಗದ್ದಲದ ಸಾಗರದಲಿ "ಮಾತಿನಮಾಲೆ" ಮರೆತು ಕೊಚ್ಚಿ ಹೋಯ್ತು !

ಬೆವರಿಟ್ಟು 'ಎರವಲಿನ ಸೂಟ'ನಲೆ ನಡುಗಿದೆನು, 'ಬಿರುಗಾಳಿ ಪೊಡೆಯಲ್ಕೆ ಕಂಪಿಸುವ ಕದಳಿ'ಯಂತೆ ;. 'ಹೋಗು ಒಳಗೆ' ಎಂದು ಸನ್ನೆಮಾಡಿದರು ಕರುಣಾಳು ಅಧ್ಯಕ್ಷರು ; ಸೋತ ಹೆಮ್ಮೆಯಲಿ, ಆಂಗ್ಲೇಯ ಭಾಷೆಯ ಕಟು ಮಾತಿನ ಶಾಪ ಉಕ್ಕಿ ಬರುತಿರೆ ವೇದಿಕೆಯಿಂದ ಹಿಂದಿರುಗಿದೆ. ಕರವಸ್ತ್ರ ತೊಯ್ದಿತ್ತು, ಬೆವರಿನಲಿ ! ನಾನೊಂದ ಬಗೆದರೆ ದೈವ ತಾ ಬೇರೊಂದ ಬಗೆದಿತ್ತು ! ಆದರೇನು 'ವಾಚಾಳಿ' ಯಾಗುವಾ ಮಹದಭಿಲಾಶೆಯ ಬಿಡುವೆನೇ ? ಬಿದ್ದರವ

ಮಾನವಿಲ್ಲ. ಮತ್ತಿದ್ದು ನಿಂತು ' ಮಣ್ಣಾಗಲಿಲ್ಲ ಮೀಸೆ ' ಎಂದರೂ ಅವಮಾನ ವಿಲ್ಲ! ಅಲ್ಲವೇ, ' ಕಳಚಿದಕೊಂಡಿ-ಹಂಪಾಪುರದ ಮಂಗಯ್ಯ. ||೨||

ನುಡಿದಂತೆ ನಡೆವುದಸದಳವಯ್ಯ! ಬೀಳಲಿಲ್ಲವೇ ಧರ್ಮಸೂನುವೇ ನುಡಿ ತಪ್ಪಿ? ಸತ್ಯವೆಂಬುದೆಲ್ಲ ಈ ಲೋಕದಲಿ ಅನರ್ಥ. ಸತ್ಯವೆಂಬುದೇ ಇಲ್ಲವಯ್ಯ! ನೆನ್ನೆ ಸಂಜೆ ಹಾಗೇ ತಿರುಗಾಡುತ್ತಾ ' ಯೂನಿಯನ್ ' ಒಳಹೊಕ್ಕೆ. ಪತ್ರಿಕೆಗ ಳೊಂದಿಲ್ಲ! ಇರುವ ಪತ್ರಿಕೆಯೆಲ್ಲ ' ವಜ್ರಮಹೋತ್ಸ ' ವವನು ಮಾಡಿಸಿಕೊಂಡು ಗತವೈಭವವ ನೆನೆದು ಗೋಳಿಡುತಿಹವು! ಪ್ರಥಮ ' ಲೋಕ ಸಂಗ್ರಾಮ ' ಕಾಲ ದಲಿ ಅವತರಿಸಿದಾ ಕುರ್ಚಿ, ಬಿಲಿಯರ್ಡ್ ಬೋರ್ಡ್, ಮೇಜುಗಳೆಲ್ಲ ಮುರಿದು ಮುಪ್ಪಾಗಿ ಮೂಲೆ ಗೊರಗಿಹವು ಕೆಲವು, ಹರಡಿಹವು ಕೆಲವು. ಅಬ್ಬ! ಸಂಗ್ರಾಮ ದೃಶ್ಯ. ಕುರುಕ್ಷೇತ್ರದ ನೋಟ!

ಹೋದವರ್ಷ ' ಓಟ ' ಬೇಡಲು ಬಂದ ಸೆಕ್ರಟರಿ ದೇವ (ಪಾಪ! ಮಹಾ ರಾಯ ತಣ್ಣಗಿರಲಾತ!) ನುಡಿದ ನುಡಿ ನೆನಪಾಯ್ತು. " ಎಲ್ಲವನು ನವಸೃಷ್ಟಿ ಯಲಿ ಸಿಂಗರಿಸುವೆನು! ಒಂದು ಪತ್ರಿಕೆಗೆ ಬದಲಾಗಿ ತರಿಸುವೆನು ನೂರ! ಪತ್ರಿಕಾ ಲಯಗಳನೇ ಸೂರೆಗೊಳ್ಳುವೆ!, ಹೆಚ್ಚೇಕೆ? ಸ್ವರ್ಗದಿಂ ಮರ್ತ್ಯಕ್ಕೆ ಕಟ್ಟಿಸುವೆ ಸೇತುವೆಯ! ಆದರೆ, ಕೊಡಿ ನಿಮ್ಮ ' ಓಟ ' ಎಂದಿದ ಸತ್ಯವಾದಿ ಸೆಕ್ರೆಟರಿದೇವ! ನೋಡಿಬನ್ನಿರಿ ಇಂದು ಅವನ ಸತ್ಯದ ಗುರುತ ಯೂನಿಯನ್ನಿನಲಿ! ನಾ ಹುಸಿ ಯಾಡಿದರೆ ಕೌರವ ನರಕದೊಳು ಕೆಡಹಯ್ಯ! ಪರೀಕ್ಷಾಕೊಠಡಿಯಲಿ ' ಕಾಪಿ ' ಹೊಡೆವಾಗ ಸಿಕ್ಕಿಬೀಳಿಸಿ " ಡಿಸ್‌ಮಿಸ್ಸು " ಗೈಸಯ್ಯ! ದೇವರದೇವ ' ಕಳಚಿದ ಕೊಂಡಿ ' ಹಂಪಾಪುರದ ಮಂಗಯ್ಯ. ||೨||

ಸುಖವೆಂದು ಹಿಗ್ಗುವೆವು; ದುಃಖವೆಂದು ಕುಗ್ಗುವೆವು. ಸುಖವಾವುದು, ದುಃಖವಾವುದು, ಎಲ್ಲ ನಿನ್ನಿಚ್ಛೆ!

ಯೂನಿಯನ್ ರೆಸ್ಟಾರೆಂಟಿನೊಳು ನುಗ್ಗಿ ಭರದಿಂ ಮಾಣಿಯನು ಕರೆದು " ದೋಸೆಯನು ತಾ " ಎಂದೆ. ಬಿಸಿಬಿಸಿಯ ದೋಸೆಯನು ಆಸೆಯಲಿ ಮುರಿದಾಗ ಪಲ್ಯದಾ ರಾಶಿಯಲಿ ಕಾಣಿಸಿತು ಜೇಡದಾ ಮರಿಯೊಂದು, " ಹುಟ್ಟಿ ವಾರವೆರ ಡಾಗಿಲ್ಲ! ನಂದಿಶೇ ನಿನ್ನ ಬಾಳಿನ ನಂದಾದೀಪ! ಹಾ! ' ಸಾವು ಬದುಕಿನ ಕಟ್ಟ ಕಡೆಯ ಹೋರಾಟದಲಿ ಸಂಧಿಸಿದೆಯಾ ಮರಣವನು " ಎಂದು ನಿಟ್ಟುಸಿರಿಟ್ಟೆ. ಸುಖವಾವುದು? ದುಃಖವಾವುದು? ಸಾವಾವುದು? ಬದುಕಾವುದು? ಎಲ್ಲ ವನು ಬಗೆ ಹರಿವುದು ನಿನ್ನ ಧರ್ಮ! " ಕಳಚಿದಕೊಂಡಿ " ಹಂಪಾಪುರದ ಮಂಗಯ್ಯ. ||೩||

ಕಾಸು ಜೀವದ ಪ್ರಾಣ, ಉನ್ನತಿಯ ಕಾರಣ, ಕಾಸ ಆಳಲು ಮನುಷ್ಯ ಹೇಸ ಲಾರನು ಎಂಥ ಕೆಲಸಕ್ಕೋ! ಕಾಫಿಪುಡಿಯಲ್ಲ! ಹುಣಿಸೆಬೀಜ, ಸುಟ್ಟಕಡಲೇ ಕಾಯ ಕವಚದ ಪುಡಿ, ಎಲ್ಲವನು ಸಮತಿಯಲಿ ಬೆರಸಿ ಕೊಡುವನದ ಕಾಫಿ ಎಂದು!

ಸುಳ್ಳಾಡುವೆನೇ ದೇವ! ನೋಡು ಬಾ ಕಾಲೇಜ ಹೋಟೆಲಿನಲಿ, ಕಾಣುವೆ ಸತ್ಯವನು! ಡಬ್ಬದೆಣ್ಣೆಯು ತಂದು ಸೊಬಗಿನಲಿ ದೋಸೆಯು ಮೇಲೆ ಸುರಿದು, ಕೆಂಪಾಗಿ ಸುಟ್ಟು, ತೊಳೆಯದಾ ತಟ್ಟೆಯಲಿಟ್ಟು ಕೊಡುವನದ "ಸ್ಪೆಷಲ್ ದೋಸೆ" ಎನುತ! ಹಳಸಿದಾ ಪಲ್ಯವೊಂದಿಷ್ಟನಿಟ್ಟು ಕರೆವನದ "ಮಸಾಲೆ" ಎಂದು ಹುಸಿಯಾಡಿದರೆ ಸುಡು ನನ್ನ ನಾಲಿಗೆಯು ದೇವ! ಇಲ್ಲದುದನಾಡಿದರೆ, ಬಿಳಿವಸ್ತ್ರವ ಧರಿಸಿ ಬಂದಾಗ ಕೆಡವು ನನ್ನನು ಕೆಸರು ತುಂಬಿದಾ ರಸ್ತೆಯಲಿ, ಕಾಲೇಜ ಬಿಟ್ಟು ತರುಣಿಯರ ಗುಂಪು ಬರುತಿರುವಾಗ! ಎಲ್ಲ ಕಾಸಿಗಲ್ಲವೇ? ಹಣವನಾರ್ಜಿಸಲು ಹೋರಾಡುವ ರಂಗವಿದು, ದೇವರದೇವ 'ಕಳಚಿದ ಕೊಂಡಿ' ಹಂಪಾಪುರದ ಮಂಗಯ್ಯ. ||೪||

ಸಂಗ್ರಹಿಸಿದವನು:—"**ದುರ್ಮುಖಿ.**"

[ಮುಂದುವರಿಯುವುದು.]

(ಜಾನ್) ಬುಳ್ಳನ ಪ್ರತಾಪ

ಈ ಪರಿಯ ಸೊಬಗನಾವ ದೇಶದಲಿ ಕಾಣೆ
ಇಂಗ್ಲೀಷರ ಪ್ರಿಯ ಇಂಡ್ಯಾದಲಲ್ಲದೆ..............

ಹರೆಯತನದಲಿ ನೋಡೆ ತರುಣ ಭೀಮರ ಸದನ,
ಸಿರಿಯತನದಲಿ ನೋಡೆ ಹರಕು ಚಿಂದಿ,
ಹಿರಿಯತನದಲಿ ನೋಡೆ ಜಗದಾದಿ ಜನವು,
ಗುರುವತನದಲಿ ನೋಡೆ ಜಗಳಗಳ ತೌರು!

ಸೋದರತ್ವದಿ ನೋಡೆ ಕುರು ಪಾಂಡು ಸುತರು,
ದೀನತ್ವದಲಿ ನೋಡೆ ಬರಿಯ ಜಠರ;
ಲಾವಣ್ಯದಲಿ ನೋಡೆ ಮೀನ ಲೋಚನರಯ್ಯ,
ಆವ ಧೈರ್ಯದಿ ನೋಡೆ ಜವನಾಂತಕ!

ಸತ್ಯದಲಿ ಸಂಚರಿಪ ಸಾಧು ಗಾಂಧಿಯು ಬಳಗ,
ಹಿಂಸೆಯನೆ ತೊರೆದಿರುವ ಹೊಸಬಗೆಯ ಕದನ;
ಜಗದ ಮೂವರ ಪೈಕಿ ನಮಗಲ್ಲದಿನ್ನೆರಡು
ಮಿಗಿಲಾದ ರಾಷ್ಟ್ರಗಳಿಗೀ ಭಾಗ್ಯವುಂಟೆ?

ಸಾಹಿತ್ಯ ವ್ಯವಸಾಯಕ್ಕೆ ಬಹುಮಾನಗಳು

ಬರುವ ೪೭ನೇ ಇಸವಿ ಮಾರ್ಚಿ ಕೊನೆಯದಿನ ಕನ್ನಡಸಾಹಿತ್ಯ ವ್ಯವಸಾಯ ಕ್ಷೇತ್ರದ ಇತಿಹಾಸದಲ್ಲಿ ಬಹುಮುಖ್ಯವಾದ ದಿನ. ಆ ದಿನ ಹಲವಾರು ಕನ್ನಡ ಲೇಖಕರ ಕಥೆ, ಕಾದಂಬರಿ, ಕವನ, ನಾಟಕಗಳನ್ನು ಟಪಾಲಿನವರು ಧಾರವಾಡದ ಮನೋಹರ ಗ್ರಂಥಪ್ರಕಾಶನ ಸಮಿತಿಯವರ ಕಚೇರಿಗೆ ತಲಪಿಸುವರು. ಅಂದೇ ಅವರು ಏರ್ಪಡಿಸಿರುವ ಸಾಹಿತ್ಯ ಸ್ಪರ್ಧೆಯ ಕೊನೆಯ ದಿನ. ಕೊಡುಗೈಯಿಂದ ಅವರು ಈ ಸ್ಪರ್ಧೆಗಳಿಗೆ ಬಹುಮಾನ ಧನವನ್ನು ಅರ್ಪಿಸಿದಾರೆ. ಇಂಥ ದೇಶದವರು, ಇಷ್ಟು ವಯಸ್ಸಿನವರು, ಈ ಪದವಿ ಗಳಿಸಿದವರು, ಈ ಜಾತಿಯ ಜನರು ಎಂಬ ಯಾವ ತಡೆಯೂ ಇಲ್ಲದೆ, ಕನ್ನಡಸೇವೆ ಸಲ್ಲಿಸಲು ಕಾತುರರಾಗಿರುವ ಹಿರಿಯಕಿರಿಯ ಸಾಹಿತಿಗಳೆಲ್ಲರನ್ನೂ ಅವರು ಈ ''ಮೇಲಾಟದ ಹಬ್ಬ''ಕ್ಕೆ ಆಹ್ವಾನಿಸಿದಾರೆ. ಕಾದಂಬರಿಗಳಿಗೆ ೪೦೦, ೨೦೦, ಸಣ್ಣಕತೆಗಳಿಗೆ ೧೦೦, ೫೦, ೨೫, ಪ್ರಬಂಧಗಳಿಗೆ ೫೦, ೫೦; ಕಾವ್ಯಕ್ಕೆ ೧೦೦; ವ್ಯಕ್ತಿ ಚಿತ್ರಗಳಿಗೆ, (ಸೂಚಿತ ವ್ಯಕ್ತಿಗಳು ೩೫) ಪ್ರತಿ ವ್ಯಕ್ತಿ ಪರಿಚಯಕ್ಕೂ ೧೫; ನಾಟಕಗಳಿಗೆ ೪೦೦, ೨೦೦; ಏಕಾಂಕ ನಾಟಕಗಳಿಗೆ ೧೦೦, ೫೦, ೨೫; ಹೀಗೆ ಬಹುಮಾನಗಳನ್ನು ಕೊಟ್ಟು ಬರಹಗಾರರನ್ನು ಗೌರವಿಸಲು ನಿಶ್ಚಯಿಸಿದಾರೆ. ಒಟ್ಟಿನಲ್ಲಿ ಮೊದಲನೆಯವರಾದವರಿಗೆ ಆಯಾ ಬಹುಮಾನಗಳಲ್ಲದೆ 'ಸಾಹಿತ್ಯಾಲಂಕಾರ' ಬಿರುದಾಂಕಿತ ಸುವರ್ಣ ಪದಕವೊಂದನ್ನು ಕೊಟ್ಟು ವಿಶೇಷ ಗೌರವ ತೋರಿಸುವರಂತೆ. ಉಳಿದಿರುವ ೫ ತಿಂಗಳಲ್ಲಿ ಕೊರವಂಜಿಯ ಲೇಖಕ ವಾಚಕ ವೃಂದದಲ್ಲಿರುವ ಅನೇಕ ತರುಣ ಸಾಹಿತಿಗಳೂ, ಕೈಕುದುರಿದ ಲೇಖಕರೂ ಈ ಮೇಲಾಟಕ್ಕಾಗಿ ಕೃತಿಗಳನ್ನು ರಚಿಸಿ ಕಳುಹಿಸುವರೆಂದು ನಂಬಿದೇವೆ. ಸಮಿತಿಯವರು ತಯಾರುಮಾಡಿರುವ ಲಘುಪತ್ರಿಕೆಯಿಂದ ಸ್ಪರ್ಧೆಯ ಹೆಚ್ಚು ವಿವರಗಳನ್ನು ತಿಳಿಯಬಹುದು.

ದಿ ಮೈಸೂರು ಪೇಪರ್ ಮಿಲ್ಸ್, ಲಿಮಿಟೆಡ್

ಯುದ್ಧಕಾಲದ ಕ್ಲಿಷ್ಟದೆಸೆ ಮತ್ತು ಅಭಾವವಿದ್ದಾಗ್ಯೂ ಈ ಆರು ವರ್ಷಗಳು ನಮ್ಮ ಈ ಪುಣ್ಯಭೂಮಿಯಲ್ಲಿ, ಮೈಸೂರು ಕಾಗದದ ಕಾರ್ಖಾನೆಯು, ವಿದ್ಯೆಯ ನಂದಾದೀಪಿಗೆಯನ್ನು ಪ್ರಕಾಶಮಾನವಾಗಿರಿಸಲು ಸಹಾಯ ಮಾಡಿದೆ.

ಕಾಗದ ಮಿತವ್ಯಯದ ಚೌಕಟ್ಟಿನಲ್ಲಿಯೇ ವಿಶ್ವವಿದ್ಯಾನಿಲಯದ ಪ್ರೌಢ ಶಾಲೆಗಳ ಪಠ್ಯ ಪುಸ್ತಕಗಳು ಮುದ್ರಿಸಲ್ಪಟ್ಟಿವೆ.

ವಾಣಿಜ್ಯ ನಿಲಯಗಳ ತುರ್ತು ಸರಪರಾಜು ನಡೆದಿದೆ.

ಸರ್ಕಾರಿ ವ್ಯವಹಾರಗಳೆಲ್ಲವೂ ಸುಗಮವಾಗಿ ಸಾಗಿವೆ

ಮತ್ತು

ಚಾತುರ್ ಸ್ವಾತಂತ್ರವು ಮುಂದುವರಿದಿದೆ

——— ಇವೆಲ್ಲವೂ ———


ಮೈಸೂರು ಕಾಗದದ ಕಾರ್ಖಾನೆಯ

'ಕಾಡುಕೋಣ' ಗುರ್ತಿನ ಕಾಗದದಿಂದಲೇ

ಈ ರೀತಿ ಮೈಸೂರು ಕಾಗದದ ಕಾರ್ಖಾನೆಯು ತಮ್ಮ ವ್ಯಾಪಾರದೊಂದಿಗೆ ರಾಷ್ಟ್ರ ಸೇವೆಯನ್ನು ಮಾಡಿದೆ. ಹಾಗೂ ಅವರು ಗಳಿಸಿರುವ ಲಾಭದಲ್ಲಿ ತಮ್ಮ ಗಿರಾಕಿಗಳ ಸೌಹಾರ್ದವೂ, ಸಹಾಯವೂ ಸೇರಿದೆ.

ಈಗ ಶಾಂತಿ ನೆಲೆಸಿರುವುದರಿಂದ ಈ ಸೌಹಾರ್ದವೂ ಸಹಾಯವೂ ಇತೋಪ್ಯತಿಶಯವಾಗುವುದೆಂದು ಹಾರೈಸುತ್ತೇವೆ.

ಶಾಂತಿಕಾಲದಲ್ಲಿ ಸೇವೆಯ ಕುರುಹು



ಸದಾ ಶ್ರೇಷ್ಠತೆಯ ಚಿಹ್ನೆ.

ಕೇಂದ್ರ ಕಛೇರಿ,

ಕೆಂಪೇಗೌಡ ರಸ್ತೆ,

ಬೆಂಗಳೂರು ಸಿಟಿ.

ಶೀಘ್ರದಲ್ಲಿಯೇ ಸ್ವಾಸ್ತಿಕ್ ಟಾಕೀಸಿನಲ್ಲಿ

ಕಲೈವಾಣಿಯವರ

ಅರ್ಧನಾರಿ

(ತಮಿಳು)

ಭೂಮಿಕೆ

P. U. ಚಿನ್ನಪ್ಪ

M. S, ಸರೋಜ

M. V. ರಾಜಮ್ಮ

T. R ರಾಮಚಂದ್ರ ಮತ್ತು ಕಾಳಿ N. ರತ್ನಂ

ಪ್ರದರ್ಶಿಸಲ್ಪಡುತ್ತದೆ.

ಪ್ರಗತಿಯವರ

ಶ್ರೀ ವಳ್ಳಿ

(ತಮಿಳು)

ಲಕ್ಷ್ಮೀ ಟಾಕೀಸ್,
ಬೆಂಗಳೂರು ದಂಡು

ಮೋತಿಲಾಲ್,
ಮೈಸೂರು

ಪ್ರದರ್ಶನದ ತಾರೀಖನ್ನು ಗಮನಿಸಿ.

A TALLAM RELEASE



Printed by B S. Iyengar, Bangalore City
Publisher—B. N. Gupta Editor—M. Shivaram